
ಕೊರವಂಜಿ

Koravanji



ಮೇ

೧೯೫೬

★

ಸಂಪಾದಕರು :

ಶ್ರೀ॥ ರಾ. ಶಿ.

ಬರಹಗಾರರು :

ಶ್ರೀ॥ ಕೇಶವ್
ಶ್ರೀಮತಿ ಸುನಂದಮ್ಮ
ಶ್ರೀ॥ ನಾ. ಕ.
ಶ್ರೀ॥ ಕರೀಂಖಾನ್
ಶ್ರೀ॥ ಅ. ರಾ. ಸೇ.
ಶ್ರೀ॥ ವಾಚ್ಮ
ಶ್ರೀ॥ "ಕೇಫ"
ಶ್ರೀ॥ ಪಾಟಾಳಿ
ಶ್ರೀ॥ ದಾಶರಥಿ ದೀಕ್ಷಿತ್
ಶ್ರೀ॥ ನಪಾಸ್ ಪ್ರಕಾಶ್
ಶ್ರೀ॥ ಅಳ್ಳೀಗನೂರ
ಶ್ರೀ॥ ಅಪ್ಪಳಾಚಾರಿ
ಶ್ರೀ॥ ಮೊದ್ದಣ್ಣ

ಇತ್ಯಾದಿ, ಇತ್ಯಾದಿ.

ಬಿಡಿ ಪ್ರತಿ

ಶೀಘ್ರದಲ್ಲಿಯೇ ಪ್ರದರ್ಶನ ನಿರೀಕ್ಷಿಸಿ!

ವಿನೋದಾರವರ—

ಚಿರಂಜೀವುಲು

(ತೆಲುಗು)

★

ತಾರಾಗಣ:

ಜಮುನ - ಬಾಲಸರಸ್ವತಿ - ಎನ್. ಟಿ. ರಾಮರಾವ್

ಸಿ. ಎಸ್. ಆರ್.

★

ದಿಗ್ದರ್ಶನ:

ವೇದಾಂತಂ ರಾಘವಯ್ಯ

★

ವಿನೋದಾರವರ—

ಅಮರ ಗೀತಂ

—(ತಮಿಳು)—

★

ಹಂಚಿಕೆದಾರರು:

VIKRAM PICTURES,

6, COTTONPET, : : BANGALORE-2.

TELEPHONE NO 2906


ಎಲ್ಲಾ ಬಗೆಯ ಮರಕೆಲಸಕ್ಕೆ ಒಳಭಾಗಕ್ಕೆ ಯಾ ಹೊರಭಾಗಕ್ಕೆ ಬಳಿಯುವದಕ್ಕೆ
ಎಲ್ಲಾ ಹವಾಗುಣದಲ್ಲಿಯೂ ನಿಲ್ಲುವಂತೆ ತಯಾರಿಸಿರುವುದು
ತೊಳೆಯಬಹುದಾದ ಗೋಡೆಯಮೇಲೆ ಬಳಿಯುವ ಫ್ಲಾಟ್ ಪೆಯಿಂಟ್
ಷಾಲಿಮಾರ್ ವುಡ್‌ಕೋಟ್
ರೆಡಿಮಿಕ್ಸ್ಡ್ ಪೆಯಿಂಟ್
ಒಳ್ಳೇ ಹೊಳಪಿರುವ, ಬಹಳ ಬಾಳಿಕೆಯುಳ್ಳ ರೆಡಿಮಿಕ್ಸ್ಡ್ ಬಣ್ಣ
ಷಾಲಿಮಾರ್ ಲಸ್ಟ್ರಾಲ್
ಅಲ್ಯೂಮಿನಿಯಂ ಪೆಯಿಂಟ್
ವಿಸ್ತಾರ ಮೇಲ್ಮೈ ಪ್ರಸರಣ ಶಕ್ತಿಯುಳ್ಳದ್ದು
ಷಾಲಿಮಾರ್ ಮ್ಯಾಟ್‌ಕೋಟ್
ಫ್ಲಾಟ್ ವಾಲ್ ಪೆಯಿಂಟ್
ಒಳಭಾಗದ ಗಾರೆ, ಕಾಂಕ್ರೀಟು, ಮತ್ತು ಮರಕ್ಕೆ ಹಿಡಿಯುವುದು. ಬಾಳಿಕೆವುಳ್ಳದ್ದು.
ಅತ್ಯುತ್ತಮವಾದ ಸಕಲಕಾರ್ಯಗಳಿಗೂ ಉಪಯೋಗಿಸಬಹುದಾದ ಎನಾಮೆಲ್
ಅನೇಕ ತರದ ಕೈಗಾರಿಕೆ ಮತ್ತು ಮನೆಕೆಲಸಗಳಿಗೆ ಉಪಯೋಗಕ್ಕೆ ಬೀಳುವುದಲ್ಲದೆ ಯಾವುದರಮೇಲೂ ಬಳಿಯಬಹುದು. ಬ್ರಷ್ಷಿನಿಂದ ಬಳಿಯಬಹುದು, ಸ್ಪ್ರೇ ಮಾಡಬಹುದು ಅಥವಾ ಬಣ್ಣದಲ್ಲಿ ಅದ್ದಲೂಬಹುದು; ಆಗಿಂದಾಗ್ಗೆ ತೊಳೆದರೂ ಬಣ್ಣ ನಿಲ್ಲುವುದು
ಷಾಲಿಮಾರ್ ಸೂಪರ್‌ಲ್ಯಾಕ್
ಷಾಲಿಮಾರ್ ಸೂಪರ್‌ಲ್ಯಾಕ್
SHALIMAR
SHALIMAR PAINT, COLOUR & VARNISH CO., LTD., "Karim Manzil", Kumbargundi Road, Bangalore City-2. Telephone No. 3607

ಕೊರವಂಜಿ

ಸಂಪುಟ ೧೬   ಮೇ ೧೯೫೬   ಸಂಚಿಕೆ ೨

ಕುಹಕಿಡಿಗಳು

ಬಾಗ್ದಾದ್ ಪಾಕ್ಟ್‌ನವರು, ಸೀಟೋದವರು ಕಾಶ್ಮೀರದ ವಿಷಯ ಮಾತನಾಡಿದ ಕಾರಣ ನಮ್ಮ ಪ್ರಧಾನ ಸಚಿವರು ಕಾಶ್ಮೀರಕ್ಕೆ ಭೇಟಿ ಇತ್ತರು ಎಂಬುವುದು ಖಚಿತವಲ್ಲವಂತೆ.

*   *   *

ಮನೆಯಲ್ಲಿ ನಾಲ್ಕು ಮಣೆಗಳಿದ್ದರೆ ಚೆನ್ನು, ಯಾರಾದರೂ ಊಟಕ್ಕೆ ಬಂದಾಗ ಎಂದು ಮಾರ್ಕೆಟ್ಟಿನಲ್ಲಿ ಮಣೆ ಕೊಳ್ಳಲು ಹೋದಾಗ, ಅಲ್ಲಿ ಮೂರಡಿ ಅಗಲದ ನಾಲ್ಕಡಿ ಉದ್ದದ ಮಣೆಗಳನ್ನು ನೋಡಿ ಎಲಎಲಾ ಇದು ಯಾರಿಗಾಗಿ ತಯಾರಾದ್ದು ಕೇಳಿದರೆ, ಅಂಗಡಿಯಾತ ಮುಗಮ್ಮಾಗಿ "ಇದು ಋಷಿಪಂಚಮಿ ಮಣೆ" ಎಂದು ಹೇಳಿದ, ಎಂದೊಬ್ಬ ವಾಚಕರು ಬರೆದಿದ್ದಾರೆ.

*   *   *

ಮುಂಬರುವ ಚುನಾವಣಾ ಕಾಲಕ್ಕೆ ಪ್ಲಾಸ್ಟಿಕ್ ಗಾಂಧೀ ಟೋಪಿಗಳನ್ನು ಸರಬರಾಜು ಮಾಡುತ್ತೇನೆ ಎಂದು ಕಾಂಗ್ರೆಸ್ ಮುಖಂಡರು ಇನ್ನೂ ಹೇಳಿಲ್ಲವಂತೆ.

*   *   *

ನವ್ಯಕವಿಯೊಬ್ಬನು ವರಮಾನ ತೆರಿಗೆಯಧಿಕಾರಿಗಳಿಗೆ ತಾನು ಕವನಗಳಿಂದ ೪,೫೦೦ರೂ. ಸಂಪಾದಿಸಿದನೆಂದು ವರದಿ ಮಾಡಿದನಂತೆ.

—ಅಧಿಕಾರಿಗಳು ವರದಿಯನ್ನು ತನಿಖೆಗಾಗಿ ಪೋಲೀಸಿನವರಿಗೆ ಕಳುಹಿಸಿದರಂತೆ.

* * *

ನಾಗಾ ಕ್ರಾಂತಿಕಾರೀ ಚಳುವಳಿಯನ್ನು ತಹಬಂದಿಗೆ ತರಲು ಗರುಡ ರೆಜಿಮೆಂಟನ್ನು ಕಳಿಸಬಾರದೆ ಎಂದೊಬ್ಬರು ಪ್ರಶ್ನಿಸಿದ್ದಾರೆ.

* * *

ಎನ್. ಸಿ. ಸಿ. ಕ್ಯಾಂಪಿಗೆ ಹೋದ ರಮಣ ತಂದೆಗೆ ಜಂಭದಿಂದ ಕಾಗದ ಬರೆದನಂತೆ.

—ನಿನ್ನೆ ನಮ್ಮ ಸಾರ್ಜೆಂಟು "ನೀನು ಮುಖಕ್ಷೌರ ಯಾಕೆ ಮಾಡಲಿಲ್ಲ" ಎಂದು ತಪ್ಪು ಕಂಡುಹಿಡಿದರು ಎಂದು.

* * *

ಭಂಡಾರನಾಯ್ಕೆ ಅವರ ವಿಜಯಕ್ಕೆ ನೆಹ್ರೂರವರ ಹಣಸಹಾಯವೇ ಕಾರಣ ಎಂದು ಕೋಟೆಲ್‌ವಾಲಾ ಹೇಳಲಿಲ್ಲವಂತೆ.

ಅಮೆರಿಕಾದ ಡಾಲರು ಎಲ್ಲಿ ಬಯಲಿಗೆ ಬೀಳುತ್ತೋ ಎಂಬ ಭೀತಿಯೇನೋ!

* * *

ಬೆಂಗಳೂರು ಟ್ರಾನ್ಸ್‌ಪೋರ್ಟ್ ಕಂಪೆನಿಯು ರಾಷ್ಟ್ರೀಕರಣವಾಗಲು ಇನ್ನೂ ಕೆಲವು ತಿಂಗಳಾಗುತ್ತದಂತೆ.

—ರಾಷ್ಟ್ರೀಕರಣವಾಗುತ್ತೆ ಅಂದಮೇಲೆ ಲೆಕ್ಕ ಪತ್ರ ಎಲ್ಲಾ ಸರಿಮಾಡ ಬೇಕಲ್ಲವೇ?

* * *

ನೂತನ ಹೋಟಲಿನ ಜಾಹಿರಾತು:

"ನಿಮ್ಮ ಮನೆಯಂತೆಯೇ ಇರುವ ಹೋಟಲು"

—ಅದೇ! ಬೇಡ ಅನ್ನೋದು!!

* * *

ಚಿನ್ನದ ಗಣಿಯು ಬತ್ತುತ್ತಿರುವುದರಿಂದ ಇದನ್ನು ರಾಷ್ಟ್ರೀಕರಣ ಮಾಡಿ ಎಂದು ಗಣಿಯ ಕಾರ್ಯವಾಹಕಗಳೇ ಚಳುವಳಿ ಹೂಡಿದ್ದಾರೆ ಎನ್ನುವುದು, ನಿಜವಾಗಬಹುದಾಗಿದ್ದರೂ ಖಚಿತವಲ್ಲವಂತೆ.

* * *

ಉರಿಗಾಳು

ದೇಶದಲ್ಲಿ ಮರಣದಂಡನೆಯನ್ನು ರದ್ದುಪಡಿಸುವ ಪ್ರಶ್ನೆ ಸರ್ಕಾರದ ಪರಿಶೀಲನೆಯಲ್ಲಿಲ್ಲವೆಂದು ಗೃಹಸಚಿವ ಶ್ರೀ ಬಿ. ಎನ್. ದಾತಾರ್‌ರವರು ಹೇಳಿದರು. ಜನನ ದಂಡನೆಯನ್ನು ರದ್ದುಗೊಳಿಸಲು ಯೋಜನೆಗಳಿವೆ, ಆದರೆ ಮರಣದಂಡನೆ ಸರ್ವರಿಗೂ ಉಂಟು.

* * *

ಮೇ ೩೧ರಿಂದ ಕಾಶಿ ಎಂಬ ಹೆಸರನ್ನು ವಾರಣಾಸಿ ಎಂದು ಬದಲಾಯಿಸುವುದರಿಂದ, ಕಾಶೀಪತಿ ಎಂಬ ಹೆಸರಿನವರೆಲ್ಲಗೂ, ಶುಲ್ಕವಿಲ್ಲದೆ ಹೆಸರು ಬದಲಾಯಿಸುವ ಅವಕಾಶ ಕೊಡಬೇಕೆಂಬ ಮನವಿ ಬಂದಿದೆ.

* * *

ಗ್ರಾಮ್ಯಪ್ರಯೋಗಗಳು ಯಾವುವು, ಎಲ್ಲೆಲ್ಲಿ ಏನೇನಿವೆ, ಗ್ರಾಮಗಳಲ್ಲಿ ಪ್ರಚಲಿತವಾಗಿರುವ ನುಡಿಗಟ್ಟುಗಳ ವೈವಿಧ್ಯವೇನು, ಇತ್ಯಾದಿ ಸಂಗತಿಗಳೆಲ್ಲ ತಿಳಿದಿಲ್ಲವೆಂದು ಕನ್ನಡ ಸಾಹಿತ್ಯ ಪರಿಷತ್ತು ಹೇಳಿದೆ....ಗ್ರಾಮಸ್ಥರು ಜಗಳ ಆಡುವಾಗ, ಸಂಗ್ರಹಕಾರರು ಹಾಜರಿರುವುದು ಸೂಕ್ತ.

* * *

ಕ್ರಿಸ್‌ಮಸ್ ಎಂಬ ಹೆಸರಿನ ದ್ವೀಪದಲ್ಲಿ ಬ್ರಿಟಿಷರು ತಮ್ಮ ಮೊದಲನೆಯ ಮಹಾ ಹೈಡ್ರೋಜನ್ ಬಾಂಬನ್ನು ಸಿಡಿಸುವರಂತೆ–ಹೈಡ್ರೋಜನ್ ಬಾಂಬನ್ನು ಕ್ರೈಸ್ತರು ಅಳವಡಿಸಿಕೊಳ್ಳಬಾರದು ಎಂದು ಕೂಗುತ್ತಿದ್ದವರಿಗೆ ಇದು ಸರಿಯಾದ ಸವಾಲು.

* * *

ಹೋರಾಟ ಇನ್ನೂ ಮುಕ್ತಾಯಗೊಂಡಿಲ್ಲವೆಂಬುದನ್ನು ಜನರು ಅರಿಯದಿರುವುದೇ ಕಷ್ಟವಾಗಿದೆ (ಶ್ರೀ ಢೇಬರ್) ಯಾವ ಮಂತ್ರಿಮಂಡಲವನ್ನು ನೋಡಿದರೂ ಜನರಿಗೆ ಇದರ ತಿಳುವಳಿಕೆ ಆಗುವುದು.

* * *

ಜಪಾನಿ ತಜ್ಞರು ವಿದ್ಯುತ್ ಕೋಚುಗಳ ತಯಾರಿಕೆಗೆ ಸಹಾಯ ಮಾಡುವರು (ಸುದ್ದಿ)

—ಫುಟ್‌ಬಾಲ್ ಕೋಚುಗಳಾಯಿತು, ಕ್ರಿಕೆಟ್ ಕೋಚುಗಳಾಯಿತು ಈಗ.....ಇವು, ಮುಂದಕ್ಕೆ....?

ಭಾರತದ ಯಾವನೊಬ್ಬ ಪ್ರಜೆಯಾದರೂ, ಪ್ರಧಾನಿಯಾಗಬಹುದು, ರಾಷ್ಟ್ರಾಧ್ಯಕ್ಷನಾಗಬಹುದು (ನೆಹರು) ಹೀಗೆ ನಮ್ಮನ್ನು ಏಕೆ ಹೆದರಿಸುತ್ತಿದಾರೆ ?

* * *

೩೫೦ ಬಿ. ಇ. ಡಿ.ಗಳು ಈಗ ನಿರುದ್ಯೋಗಿಗಳಾಗಿದಾರೆ; ಅವರಿಗೆ ಉಪಾಧ್ಯಾಯ ನೌಕರಿಗಳನ್ನು ಕೊಡಿಸಬೇಕು, ಎಂಬ ಕೂಗೆದ್ದಿದೆ....ನೇಮಕವಾದ ಮೇಲೆ, ಅವರಿಗೆ ಶ್ರಮ ಯಾವುದೂ ಇಲ್ಲದ ಹಾಗೆ, ವಿದ್ಯಾರ್ಥಿಗಳು ನೋಡಿ ಕೊಳ್ಳುತ್ತಾರೆ.

* * *

ಮಹಾ ವೈಭವದಿಂದ ಕೂಡಿದ ವಿಧಾನಸೌಧದ ನಿರ್ಮಾಣ ಇಷ್ಟರಲ್ಲೇ ಪೂರ್ತಿಯಾಗುವುದರಿಂದ, ಮುಂದಿನ ಅಸೆಂಬ್ಲಿ ಚುನಾವಣೆಗೆ ನೂರಾರು ಉಮೇದು ವಾರರು ಮುಂಬರುವ ನಿರೀಕ್ಷೆ ಇದೆಯಂತೆ.

* * *

ಅಂಚೆ ಇಲಾಖೆಗೆ ಆ ಹೆಸರು ಬಂದದ್ದು ದಮಯಂತಿಯ ಹಂಸದಿಂದ ಎಂದು ಪಿ. ಎಂ. ಜಿ. ಒಬ್ಬರು ಬರೆಯುತ್ತಾರೆ.

* * *

ಹಿಂದುಳಿದವರೂ ಬಹು ಬೇಗ ಪ್ರಗತಿಯನ್ನು ಸಾಧಿಸಬಲ್ಲರು (ನೆಹರು).... ಉಪಾಯ ನಮಗೂ ಗೊತ್ತಿದೆ; ಗಾಡಿಯನ್ನು ಹಿಮ್ಮುಖವಾಗಿ ಓಡಿಸಿದರೆ, ತೀರಿತು.

* * *

ತೀರ್ಥಹಳ್ಳಿ ತಾಲ್ಲೂಕು ಮೃಗವಧೆಯಲ್ಲಿ ಶ್ರೀ ರಾಮಸೇವಾ ಸಂಘದವರಿಂದ ಶ್ರೀ ರಾಮೋತ್ಸವವು ನಡೆಯಿತು

* * *

ಅಗಸೆ ಬೀಜವನ್ನು ಸಸ್ಯ ಮಾಂಸವೆಂದು ಕರೆದರೂ ತಪ್ಪಾಗಲಾರದು (ಪತ್ರಿಕೆ) ಅಸಹ್ಯವಾಗುವುದು, ಅಷ್ಟೆ, ಹಲವರಿಗೆ.

* * *

ಶಿಶುವಿಹಾರಗಳ ಸಂಚಾಲಕಿಯರಿಗೆ ಮಿಡ್‌ವೈಫ್ ತರಬೇತಿ ಅಗತ್ಯವೆಂದು ನಮ್ಮ ಗ್ರಾಮದಲ್ಲಿ ಆರೋಗ್ಯಾಧಿಕಾರಿಗಳು ಹೇಳಿದರು (ಸುದ್ದಿ)

* * *

"ಡಿ. ಡಿ. ಪಿ. ಐ.ರವರ ಅಧ್ಯಕ್ಷತೆಯಲ್ಲಿ ಶ್ರಮದಾನ ಮುಕ್ತಾಯ ಸಮಾರಂಭ" (ಪತ್ರಿಕೆ)....ಇನ್ನು ಉಳಿದಿರುವುದು, ಆಶ್ರಮದಾನ.

* * *

ಕೊರವಾವಲೋಕನ

"ಚೈತ್ರ ಪೌರ್ಣಮಿ. ಸುಖವಾಗಿ ರಾತ್ರಿ ಉಂಡು ಐವತ್ತರ ಪ್ರಾಯದ ಗಂಡ ಸೋಫಾದ ಮೇಲೆ ಆರಾಮವಾಗಿ ಕುಳಿತಿದ್ದಾನೆ. ಮೂರನೆ ಹೆಂಡತಿ ಹದಿನಾರು ವರುಷದಾಕೆ ಎಲೆ ಅಡಿಕೆ ತಟ್ಟೆ ಹಿಡಿದುಕೊಂಡು ಬಂದು, ಮಲ್ಲಿಗೆಯ ಕಂಪನ್ನು ಕೊಠಡಿಗೆಲ್ಲಾ ಹರಡಿ ಬಳಿ ಕೂತಿದ್ದಾಳೆ. ಅಡಿಕೆಯನ್ನು ತನ್ನ ಪ್ರಾಣವಲ್ಲಭನಿಗೆ ಕೊಟ್ಟು, ತಾನೂ ಒಂದಿಷ್ಟನ್ನು ಬಾಯಿಗೆ ಹಾಕಿಕೊಂಡು, ನಂತರ ವಿಳ್ಳೆಯದೆಲೆಗೆ ಸುಣ್ಣ ಹಚ್ಚಲು ಆರಂಭಿಸಿದ್ದಾಳೆ.

ಮುದಿ ಗಂಡ ಒಮ್ಮೆ ಅಡಿಕೆಯನ್ನು ಅಗಿದ. ಒಂದು ಚೂರು ಬಲಗಡೆಯ ದವಡೆಹಲ್ಲಿನ ತೂತಿಗೆ ಸಿಕ್ಕಿಹಾಕೊಂಡಿತು. ಇನ್ನೊಂದು ದೊಡ್ಡ ಚೂರು, ಎಡಗಡೆ ದವಡೆಯಲ್ಲಿ ಹೋದ ವರ್ಷ ಕಿತ್ತುಹಾಕಲ್ಪಟ್ಟಿದ್ದ ಹಲ್ಲಿನ ದೊಗರಿನಲ್ಲಿ ಅದುಮಿ ಕೊಂಡಿತು. ಇವರೆಡನ್ನು ನಾಲಿಗೆಯಿಂದಲೇ ಹೊರದೂಡುತ್ತಿದ್ದಾನೆ. ಅಸಾಧ್ಯ ವಾಗಿದೆ, ಎಂದು ಆ ಕಡೆ ನೋಡುತ್ತಾನೆ. ಆ ಮುಗ್ಧೆ ಅಡಿಕೆಯನ್ನೆಲ್ಲಾ ಅರೆದು ವಿಳ್ಳೆಯದೆಲೆಗೆ ಸಿದ್ಧವಾಗಿದ್ದಾಳೆ.

ತಾನು ಹಲ್ಲು ಬಿದ್ದವ ಅಂತ ಆಕೆಗೆ ತೋರಿಸಿಕೊಳ್ಳಬಾರದು. ಆದರೂ ಅಗಿಯಹೋದರೆ ಯಾತನೆ, ನರಕಯಾತನೆಯಾಗುತ್ತೆ.

ಇಂತಹ ಸಂಧಿಗ್ಧ ಸ್ಥಿತಿಯಲ್ಲಿ ಆತ ತನ್ನ ಮಾನ ಕಾಪಾಡಿಕೊಳ್ಳುಕ್ಕೆ ಆಗುತ್ತದೆಯೇ ?"

ಎಂದು ಕೇಳಿದ ಕಠಗದ ದಿವಸ ಸಂಜೆ ೭॥ ಹೊತ್ತಿಗೆ ಕ್ಲಬ್ಬಿನಲ್ಲಿ. ಕೊರವನಿಗೆ ಸುಮಾರು ವಯಸ್ಸು ದಿಟ. ಆದರೂ ರಾಕ್ಷಸನ ಹಲ್ಲುಗಳೇ ಇವೆ. ಇದು ಆತ್ಮಕತೆ ಯಾಗಿರಲಾರದು. ಅಂದ ಮೇಲೆ. ?

ಇದ್ದವರೆಲ್ಲರೂ ಒಂದೊಂದೇ ಹುಬ್ಬನ್ನು ಪ್ರಶ್ನಾರ್ಥಕ ಚಿಹ್ನೆಯಂತೆ ಮೇಲಕ್ಕೆತ್ತಿ ಕೊಂಕಿಸಿದೆವು.

ಮುಗ್ಧೆ ಗಂಡನ ದವಡೆಯ ತಾಪತ್ರಯವನ್ನು ಊಹಿಸಿ ತಿಳಿದುಕೊಂಡು, ಹಾಗೂ ತಿಳಿಯದವಳಂತೆ ಇರಲು ಯತ್ನಿಸಿದರೂ, ಒಂದು ಮಂದಹಾಸ ಅವಳ ಮುಖವನ್ನು ಹಾದು, ಸ್ವಲ್ಪಮಟ್ಟಿಗೆ ಬಾಯ್ತೆರೆದು ಹಲ್ಲು ಕಾಣಿಸುತ್ತೆ. ಅಲ್ಲವೇ!

ಅದೇ ರೀತಿ ಕೊರವ ಸ್ವಲ್ಪ ಹುಸಿನಗೆ ನಕ್ಕು—ನಂತರ ವಿಶದೀಕರಿಸಿದ. ಈಗ ನೋಡಿ ಆ ಮುದಿಗಂಡನ ಸ್ಥಿತಿಯೇ ನಮ್ಮ ಸಚಿವರಿಗೂ ಬಂದಿದೆ ಅವರವರ ಹಲ್ಲು ಬಿದ್ದು, ಇದ್ದ ಹಲ್ಲು ತೂತು ಬೀಳಲು ಶುರುವಾಗಿದೆ. ಈಗ ಮದುವೆಯಾಗಿ ಬರಲಿರುವ ಕೆಚ್ಚೆದೆಯುವರೆದುರಿಗೆ ಇದು ಕಂಡು ಬರುತ್ತದಲ್ಲಾ ಇದನ್ನು ಹೇಗೆ ಮುಚ್ಚಿಡಲು ಸಾಧ್ಯ ಎಂಬ ಯೋಚನಾಬೇನೆ ಇವರ ಬೆನ್ನು ಹತ್ತಿದೆ. ಅಕ್ಟೋಬರ್ ೧ಕ್ಕೆ ಅಳಿಯನ ಕುರುಡುಪರೀಕ್ಷೆಯಾಗುತ್ತದೆ ಅಲ್ಲವೇ ?—ಕೊರವ ಸ್ವಲ್ಪ ಕ್ರೇಸಿ.

* * *

ಸಾಚಾ ನೆಲಗಡಲೆಕಾಯಿ ಬೀಜ ನೋಡಿ! ಹಳ್ಳಿಹಳ್ಳಿಗಳಲ್ಲೂ ಜನ ಅದನ್ನು ಸುಲಿದು ತಿನ್ನುತ್ತಾರೆ. ಆಡಂಬರವಿಲ್ಲ. ಅಲಂಕಾರವಿಲ್ಲ. ಆದರೆ ಹನ್ನೆರಡು ಸುಲಿದ ಬೀಜವನ್ನು ಹುರಿದು ಉಪ್ಪು ಹಾಕಿ, ಅಂದದ ತಟ್ಟೆಯಲ್ಲಿ ಶೃಂಗರಿಸಿಕೊಂಡ ಚಾರಕ ತಂದಿಟ್ಟರೆ, ಒಂದು ಚೀಲ ಕಡಲೇಕಾಯಿನ ಬೆಲೆಯನ್ನು ಆ ಹನ್ನೆರಡು ಕಾಳಿಗೆ ಕೊಡಲು ನಾಗರಿಕರು ಸಿದ್ಧ—ಕ್ಲಬ್ಬಿನಲ್ಲಿ.

ಇದೂ ನ್ಯಾಯವೇ ! ಅನ್ನಿ. ಏಕೆಂದರೆ ಆ ಚಾರಕ ಶಬರಿಯಂತೆ ತಾನು ರುಚಿ ನೋಡಿ ಕಂಯ್ಯಾಗಿರುವುದನ್ನು ಬೇರ್ಪಡಿಸಿ ರುಚಿಯಾದುದನ್ನೇ ಮೆಂಬರು ಗಳಿಗೆ ತಂದಿಡುತ್ತಾನೆ.

ಅದನ್ನು ಕಾಳು ಕಾಳಾಗಿ ಬಾಯಿಗೆಸೆದು, ಸಾವಧಾನವಾಗಿ ಅಗಿದು, ನುಂಗುವಾಗ, ಏನೋ ಸುಖ ಕಾಣುತ್ತಾರೆ, ಆ ರಸಿಕರು.

ಆದರೆ ಕೊರವನಿಗೆ ಅದು ಸಂಕಟಕಾರಿ !

ಇದೇನ್ರೋ ! ಕ್ಲಬ್ಬಿಗೆ ಬರುವ ಹಾದಿಯಲ್ಲಿ, ಗೇಟಿನಾಚೆ ಇರುವ ಮರದಡಿ ಯಲ್ಲಿ ಸೀಮೆಯೆಣ್ಣೆ ಬುಡ್ಡಿಯ ಕೆಳಗೆ ಇದೇ ಹಣಕ್ಕೆ ಒಂದು ಮಕರಿ ಕಡಲೇಕಾಯಿ ಮಾರುತ್ತಾಳಲ್ಲೋ ! ಅದನ್ನೇ ತಂದು ತಿನ್ನಬಾರದೇ ? "ಅಲ್ಲಾ ಕೊರವ ! ನಮಗೆ ಬುದ್ಧಿ ಹೇಳೋನು ನೀನು ? ನೀನೇ ಯಾಕೆ ಇದನ್ನು ಆಚರಣೆಗೆ ತರಬಾರದು" ಎಂದೆ ನಾನು, ಜಯಗಳಿಸಿದ ದನಿಯಲ್ಲಿ "ಅಲ್ಲಾ ! ನಮ್ಮ ರಾಜಕಾರಣ ನಾಯಕರಂತೆ ಆಡುತ್ತೀಯಲ್ಲಾ ! ಹೇಳೋದೆಲ್ಲಾ ಸದಾಚಾರ, ಮಾಡೋದೆಲ್ಲಾ ಅನಾಚಾರ" ಅಂತ. ಎಂದು ಸೇರಿಸಿದೆ, ಒಗ್ಗರಣೆ ಹಾಕುವ ತೆರದಲ್ಲಿ.

ಕೊರವ ಕುರ್ಚಿಯಿಂದ ಎದ್ದ. "ಬೇರರ್" ಎಂದು ಬೊಬ್ಬೆ ಇಟ್ಟ. ಹೆದರಿ ಓಡಿಬಂದ ಬೇರರೊಬ್ಬ. ಅವನ ಬಲಗೈಯಲ್ಲಿ ಬಟ್ಟಲುಗಳನ್ನು ಇಟ್ಟು ಕೊಂಡು ತರುವ ಒಂದು ತಟ್ಟೆ. ಎಡಗೈಯ್ಯಲ್ಲಿ ಒಂದು ಟವಲು. ಅವೆರಡನ್ನೂ ಕೊರವ ಕಿತ್ತುಕೊಂಡ. ಮೇಜಿನ ಮೇಲೆ ಟವಲು ಹಾಸಿದ. ಅದರ ಮೇಲೆ ತಟ್ಟೆಯಿಟ್ಟ. ಅಂಗಿಯ ಬಲ ಕೆಳ ಜೇಬನ್ನು ಅದರ ಮೇಲೆತ್ತಿ ಹಿಡಿದು ತಲೆಕೆಳಗು

ಮಾಡಿದ, ಸುಮಾರು ಎರಡು ಪಾವು ಕಡಲೇಕಾಯಿ ತಟ್ಟೆಯೊಳಕ್ಕೆ ಬಿತ್ತು. ನಂತರ ಎಡ ಕೆಳ ಜೇಬನ್ನೂ ಅದೇ ರೀತಿ ಮಾಡಿದ ಇನ್ನರ್ಧ ಸೇರು ಕಡಲೇ ಕಾಯಿ. ನಂತರ ಷರಾಯಿ ಜೇಬುಗಳಿಂದ ಕಡಲೇಕಾಯಿ ತೆಗೆದಿಟ್ಟ. ಅವನ ಮೇಲೆ ಒಟ್ಟು ಎಷ್ಟು ಕಡಲೇಕಾಯಿ ಇತ್ತು ಅಂತೀರಿ. ಮೂರು ಸೇರಿನಷ್ಟು!

ನನ್ನನ್ನು ನೋಡಿ, ಕೊಲ್ಲುವ ದೃಷ್ಟಿಯಿಂದ ಹೇಳಿದ. "ಮಾಡೋ ಆಚಾರೀನ್ನ ನೋಡಿ ಹೇಳೋ ಆಚಾರಿ ಇವ ಎಂದು ಮೋಸ ಹೋಗಬಾರದೋ ಮಗು" ಎಂದು—ಕಡಲೇ ಕಾಯನ್ನ ನಾವೇ ಸುಲಿದು ತಿಂದರೆ ಬಲು ರುಚಿ ಅಂತ ಅವತ್ತೇ ಗೊತ್ತಾದದ್ದು.

* * *

ಈಗಿನ ಕಾಲದಲ್ಲೂ ಕೂಡ ಅಚ್ಚುಕಟ್ಟಿನ ಗರಿಗರಿ ಸರಿಗೆ ರುಮಾಲು. ಅಡ್ಡ ಗಂಧ. ಲಕ್ಷಣವಾದ ಅಕ್ಷತೆ. ಹತೋಟಿಯಲ್ಲಿಟ್ಟ ಮೀಸೆ. ಎಲಡಿಕೆಯ ರಂಗಿನ ತುಟಿಗಳು. ನೇವಿಬ್ಲೂ ಸೂಟು. ಟೈ, ಕಾಲ್ಚೀಲ, ಕರ್ಚೀಫ್ ಎಲ್ಲವೂ ಸಮ ರಂಗಿನದು. ವಿಲಾಯಿತಿಯ ಬೂಟ್ಸು. ಇಷ್ಟನ್ನೂ ಠಾಕು ಠೀಕಾಗಿ ಧರಿಸಿ ಕ್ಲಬ್ಬಿಗೆ ಬರುವವರೊಬ್ಬರುಂಟು, ಶೆಕೆಗಾಲದಲ್ಲಿ ಆತನನ್ನು ನೋಡಿದರೆ ಬರೀ ಷರ್ಟಿನಲ್ಲಿದ್ದರೂ ಕೂಡ ನಾವು ಬೆವರುತ್ತಿದ್ದೆವು. ಆದರೂ ಒಂದು ರೀತಿಯ ಅವ್ಯಕ್ತ ಗೌರವ. ಶಿಸ್ತು ಎಂದರೆ ಶ್ರೀ ರಾಮರಾಯರೇ ಎನ್ನಬಹುದು.

ಈ ರೀತಿಯ ಶಿಸ್ತಿನ ಪ್ರತಿನಿಧಿಯಾಗಿದ್ದಾತ. ರಿಟೈರಾದ ಮೇಲೆ ಮಕ್ಕಳೆಲ್ಲಾ ಲಕ್ಷಣವಾಗಿ ಸಂಪಾದಿಸಿಕೊಂಡು ಇರುವಾಗ, ಹಣದ ತಾಪತ್ರಯ ಇಲ್ಲದಿರುವಾಗ, ರಾಮಕೃಷ್ಣ ಅಂತ ಸುಮ್ಮನಿರಬಾರದೇ? ಕಾಲವ್ಯವಹರಣ ಮಾಡುಕ್ಕೆ ಅಂತ, ಹಾಗೂ ಸಮಾಜಸೇವೆ ಆಗಲಿ ಅಂತ ಗಾಂಧಿ ಉಚಿತ ವಾಚನಾಲಯದ ಅಧ್ಯಕ್ಷನಾಗಿ ಕೆಲಸ ಮಾಡತೊಡಗಿದ. ಆ ಅಧ್ಯಕ್ಷಪದವಿ ಪಡೆದ ದಿವಸ, ಸಂಜೆ ಕ್ಲಬ್ಬಿಗೆ ಬಂದಾಗ ನಮ್ಮೆಲ್ಲರಿಗೂ ಎಳನೀರನ್ನು ಕೊಟ್ಟು ಸತ್ಕರಿಸಿದ್ದ. ಇಡೀ ಭಾರತದಲ್ಲೇ ಗಾಂಧೀ ಉಚಿತ ವಾಚನಾಲಯವು ಮೊದಲ ಅಂತಸ್ತಿನದಾಗಿ ಮಾರ್ಪಾಟು ಮಾಡುತ್ತೇನೆ. ಇಡೀ ಸರ್ಕಾರವನ್ನೇ ಶಿಸ್ತಿನಿಂದ ಆಳಿದ ನನಗೆ ಉಚಿತವಾಚನಾಲಯ ಮಗುವಿನಾಟ ಎಂದ.

ಇದಾಗಿ ಎರಡು ತಿಂಗಳಾಗಿತ್ತು ಕ್ಲಬ್ಬಿಗೆ ಆತ ಬಂದು. ಹಾಗಾಗಿ ಶನಿವಾರ ಸಂಜೆ ಆತನನ್ನು ನೋಡಿದಾಗ, ಎಲ್ಲರೂ ಅವನನ್ನು ಸುತ್ತುಗಟ್ಟಿ ಕೂತರು. ಒಬ್ಬೊಬ್ಬರ ಮನಸ್ಸಿನಲ್ಲೂ "ಯಾಕೆ ಶ್ರೀರಾಮರಾಯರ ಉಡುಪು ಶಿಸ್ತು ಎಲ್ಲಾ ಅದೇ ರೀತಿ ಇದ್ದರೂ, ಮುಖ ಸ್ವಲ್ಪ ಸುಸ್ತಾಗಿದೆ. ಏನಾದರೂ ಖಾಯಿಲೆ ಅಂತ ಅರಿಯದ ಡಾಕ್ಟರು ಹೆದರಿಸಿದ್ದಾರೆಯೋ?" ಎಂದು ಅಳುಕು. ಹೇಗಿದೆ ರಾಯರೇ? ಗಾಂಧೀ ಉಚಿತವಾಚನಾಲಯ ಎಂದು ಕೇಳಿದೆವು.

"ಸರ್ಕಾರಾನ ನಡೆಸೋದು ಸುಲಭ, ಸಂಸಾರ ನಿರ್ವಹಿಸೋದು ಸುಲಭ, ಅಳಿಯಂದಿರನ್ನು ಪಳಗಿಸೋದು ಕೂಡ ಸುಲಭ. ಆದರೆ ಸಾರ್ವಜನಿಕ ಉಚಿತ ವಾಚನಾಲಯವನ್ನು ಸರಿಮಾಡೋದು ಬಲು ಕಷ್ಟ. ಇಲ್ಲಿರಬೇಕಾದ ಪತ್ರಿಕೆಯು ಅಲ್ಲಿ. ಈ ಪತ್ರಿಕೆಯಲ್ಲಿರಬೇಕಾದ ಪುಟಗಳು ಬೇರೊಂದರಲ್ಲಿ. ಅಲ್ಲಿರಬೇಕಾದ ಚಿತ್ರದ ಪುಟಗಳು ಕಿಸೆಯಲ್ಲಿ, ಆ ಕಿಸೆಯು ಇನ್ನೊಬ್ಬರ ಜೇಬಿನಲ್ಲಿ ಹೀಗೆ ಬಲು ಪೋಕರಿ ಹುಡುಗರು ಕಾರ್ಯೋನ್ಮುಖರಾಗುತ್ತಾರೆ ಅಲ್ಲಿ. ಒಂದು ಸಾರಿ ಟೈಂಸ್ ಆಫ್ ಇಂಡಿಯಾದ ಸಿನಿಮಾ ತಾರೆಯ ರಂಗು ರಂಗಿನ ಅರೆಬೆತ್ತಲೆಯ ಚಿತ್ರವನ್ನು ನನ್ನ ಜೇಬಿನಲ್ಲೇ ಹಾಕಿಬಿಟ್ಟಿದ್ದರು ಮನೆಯಲ್ಲಿ ನನ್ನ ಹೆಂಡತೀಗೆ ಸಮಾಧಾನ ಹೇಳೋ ಹೊತ್ತಿಗೆ ಸುಸ್ತಾಗಿ ಹೋದೆ. ಇನ್ನೂರು ರೂಪಾಯಿನ ಸೀರೆ ರವಿಕೆ ತೆರಬೇಕಾಯ್ತು. ಚಂದಾ ಹಣವಂತೂ ವಸೂಲಿ ಮಾಡಿದವನ ಪಾಲೇ ಹೊರತು, ವಾಚನಾಲಯಕ್ಕೆ ಸಂದುವುದಿಲ್ಲ. ಹೀಗಾಗಿ ಸರಿ ಮಾಡಹೋದ ನಾನು ಬೇಸ್ತು ಬಿದ್ದಿದ್ದೇನೆ. ಇನ್ನು ಹತ್ತು ತಿಂಗಳು ಈ ಗಜಗರ್ಭ ಹೇಗೆ ಹೊರುವುದಪ್ಪಾ! ಎನ್ನಿಸಿದೆ" ಎಂದು ಅಳುವ ಮೋರೆ ಮಾಡಿದ.

ಕೊರವ ಸ್ವಲ್ಪ ಕನಿಕರದಿಂದ ಆತನನ್ನು ನೋಡಿದ. ಆ ನೋಟದ ಮಹಿಮೆ ನೋಡಿ, ಸುತ್ತಲೂ ಬೆಳದಿಂಗಳು ಚೆಲ್ಲಿದ ಹಾಗೆ ತಂಪಾದ ವಾತಾವರಣ ಹುಟ್ಟಿತು. ಕುಹಕವಿಲ್ಲದ ಕೊರವ ಅಷ್ಟು ಶಾಂತಮಯ. ಹಗಲಿನ ಬೆಳದಿಂಗಳಷ್ಟೇ ವಿರಳ. ಈ ವಾತಾವರಣದಲ್ಲಿ ಬುದ್ಧನು ೨,೫೦೦ ವರ್ಷಗಳ ಹಿಂದೆ ಸಾರಿದಂತೆ ಉಪದೇಶ ಮಾಡಿದ.

"ಶ್ರೀರಾಮರಾಯರೇ ! ಉಚಿತವಾಚನಾಲಯಕ್ಕೆ ಕಾವಲು ಯಾರು ?
ಚಲಚ್ಚಿತ್ರ ದಿಗ್ದರ್ಶಿಗೆ ಹೊಣೆಯು ಯಾರು ?
ಮೂಗಿಯ ಸಂಸಾರಕ್ಕೆ ಇತಿಮಿತಿಯುಂಟೇ ?
ಕಿವುಡನ ಸಂಗೀತಕ್ಕೆ ಬಂದುಬಸ್ತು ಇಹುದೇ ?
ಕುರುಡನ ಹೆಂಡ್ತಿಗೆ ಶಿವನೇ ಕಾವಲು.
ನಿಮ್ಮ ಸಂಸ್ಥೆಗೂ ಅವನೇ ಕಾವಲು.
ನೀವು ಯಾಕೆ ವೃಥಾ ತ್ರಾಸುಪಡುತ್ತೀರಿ ? ಎಂದ.
ಶ್ರೀರಾಮರಾಯರ ಮುಖ ಸ್ವಲ್ಪಮಟ್ಟಿಗೆ ನಗುಮೊಗವಾಯ್ತು.

ನಮ್ಮೂರಿನ ಮಳೆ

ನಮ್ಮೂರು ಬಹಳ ದೊಡ್ಡದು. ಅಲ್ಲಿ ಮಲ್ಲೇಶನಗುಡಿ ಎಕ್ಸ್‌ಟೆನ್‌ಷನ್ ಒಂದು ತುದಿ. ಬಸವನಪುರ ಇನ್ನೊಂದು ತುದಿ. ಅಲ್ಲಿಗಲ್ಲಿಗೆ ಸುಮಾರು 7 ಮೈಲಿ ದೂರ. ನಾನು ಮಲ್ಲೇಶನಗುಡಿ ಆಚೆ ಇರುವ ಮೊಮ್ಮಗನ ಇನ್‌ಸ್ಟಿಟ್ಯೂಟಿನಲ್ಲಿ ಓದುತ್ತಿದ್ದ ಕಾಲ ಆಗ. ಬಸವನಪುರದಿಂದ ಪ್ರತಿನಿತ್ಯ ನಮ್ಮೂರ ಬಸ್ಸಿನಲ್ಲಿ ಇನ್‌ಸ್ಟಿಟ್ಯೂಟಿಗೆ ಹೋಗಿ ಬರುತ್ತಿದ್ದೆ.

ಒಂದು ಸಂಜೆ ಎಂದಿನಂತೆ 4½ ಬಸ್ಸಿಗಾಗಿ ಕಾದಿದ್ದೆ. ಇನ್‌ಸ್ಟಿಟ್ಯೂಟಿನ ಹತ್ತಿರ. ಬಸ್ ಬರುವ ಹೊತ್ತಿಗೆ ಮೋಡ ಕವಿದುಕೊಂಡು ಮಳೆ ಜೋರಾಗಿ ಶುರುವಾಯ್ತು. ಬಸ್ಸಿನೊಳಕ್ಕೆ ಹೋಗಿ ಕೂತೆ. ಬಸ್ ಮಲ್ಲೇಶನಗುಡಿ 8ನೆ ಕ್ರಾಸಿಗೆ ಬಂದಾಗ ಬಹಳ ಜನ ಒಳಗೆ ನುಗ್ಗಿದರು. ಅವರ ಪೈಕಿ ಆಗಲೇ ಮಳೆಕೋಟು, ಮುಖ ಮುಕ್ಕಾಲು ಮುಚ್ಚಿದ ಮಳೆಟೋಪಿಯ ವ್ಯಕ್ತಿಯೊಂದು ನನ್ನ ಹಿಂದಿನ ಸೀಟಿನಲ್ಲಿ ಕೂತಿತು.

ಬಸ್ ಸುಕುನೂರ ಪಾರ್ಕ್ ಎಕ್ಸ್‌ಟೆನ್‌ಷನ್ ದಾಟಿ ಬಂದಿತು. ಅಲ್ಲಿ ನೋಡಿದರೆ ಒಂದು ಹನಿ ಮಳೆಯೂ ಇಲ್ಲ. ನೆಲವೆಲ್ಲಾ ಬೇಸಿಗೆಯ ನೆಲದಂತೆ ಒಣಗಿತ್ತು. ಮಳೆ ಅಲ್ಲಿ ಸುರಿದೇ ಇರಲಿಲ್ಲ.

ಆಗ ಪ್ರಯಾಣಿಕರೊಬ್ಬರೆಂದರು, "ಏನಾಶ್ಚರ್ಯ. ಮಲ್ಲೇಶನಗುಡಿಯಲ್ಲಿ ಅಷ್ಟು ದೊಡ್ಡ ಮಳೆ. ಇಲ್ಲಿ ಒಂದು ಹನಿಯೂ ಬಿದ್ದಿಲ್ಲವಲ್ಲಾ."

ಇನ್ನೊಬ್ಬರು ಹೇಳಿದರು, "ಇದೇನ್ರಿ ದೊಡ್ಡ ವಿಷಯ. ಹೋದ ವರುಷ ನಮ್ಮ ಬಸವನಪುರದ 4ನೆ ಕ್ರಾಸಿನಲ್ಲಿ ಭಾರಿ ಮಳೆ. 5ನೆ ಕ್ರಾಸಿನಲ್ಲಿ ಮಳೆಯೇ ಇಲ್ಲ.

ಮತ್ತೊಬ್ಬರು ಬಾಯಿ ಹಾಕಿದರು ನಡುವೆ. "ಅದಿರಲಿ, ಇದು ಕೇಳ್ರೀ. ನಮ್ಮ ಮನೆ ಹಿತ್ತಲಿನಲ್ಲಿ ಜೋರು ಮಳೆ. ಮನೆ ಮುಂಭಾಗದಲ್ಲಿ ಮಳೆಯ ಸೂಚನೆಯೇ ಇರಲಿಲ್ಲ."

ಜರಿಪೇಟದವರೊಬ್ಬರು ಗಂಟಲು ಸರಿಮಾಡಿಕೊಂಡು, "ಓಹೋಹೋಹೋ! ಅದೇನಾಶ್ಚರ್ಯ. ಮೊನ್ನೆ ನಮ್ಮ ಮನೆ ಮೇಲೆ, ಹೊರಗೆಲ್ಲಾ ಮಳೆ. ಒಳಗೆ

ಒಂದು ತೊಟ್ಟೂ ಮಳೆ ಇಲ್ಲ" ಎಂದರು. ಯಾರೋ ತಾವೇ ಉಸ್ತುವಾರಿ ನಡೆಸಿ ಒಳ್ಳೆ Concreteನಲ್ಲಿ ಮನೆ ಕಟ್ಟಿಸಿಕೊಂಡ ಕಂಟ್ರಾಕ್ಟರು ಇರಬೇಕೆಂದುಕೊಂಡೆ.

ಆ ವೇಳೆಗೆ ಬಸ್ Race Course ಹತ್ತಿರ ಬಂದಿತು. ಕುದುರೆ ಕೆನೆದ ಶಬ್ದವಾಯ್ತು. ಬೆಚ್ಚಿಬಿದ್ದು ಹಿಂತಿರುಗಿದೆ ಶಬ್ದ ಬಂದ ಕಡೆ. ನೋಡಿದರೆ ಮಳೆ ಟೋಪಿ ವ್ಯಕ್ತಿ. ದಿಟ್ಟಿಸಿ ನೋಡಿದೆ, ಕೊರವ ಇನ್ನೊಂದು ಸಲ ಕೆನೆದು ಒದರಿದ. "ಇದೆಲ್ಲಾ ಏನು ಮಹಾ ವಿಷಯ. ಈ ಮಹದಾಶ್ಚರ್ಯ ನೋಡಿ." ಪ್ರಯಾಣಿಕರೆಲ್ಲರೂ ಅವನ ಕಡೆ ತಿರುಗಿದರು. ಕೊರವ ಮುಂದುವರೆಸಿದ, "ಬಸ್ಸಿನ ಹೊರಗೆ ಈಗ ಮಳೆಯೇ ಇಲ್ಲ. ಒಳಗೆ ನೋಡಿ ಎಂಥಾ ಮಳೆ" ಎಂದು ಎಲ್ಲಾ ಕಡೆಯಿಂದಲೂ ಷವರ್‌ನಂತೆ ಇನ್ನೂ ಸೋರುತ್ತಿದ್ದ ನಮ್ಮೂರಿನ ಬಸ್ಸಿನ ಸೂರನ್ನು ತೋರಿದ.

—ಕೇಶವ್



"ಅಲ್ಲ, ಡಾರ್ವಿನ್ ಥಿಯರೀನ ನೀವು ಒಪ್ತೀರಾ?"

ಸಾಹಿತಿ ಸರಸು

"ನೋಡಿದರೇನ್ರಿ! ಹಂಗಿಸುತ್ತಿದ್ದರಲ್ಲ ಇಷ್ಟು ದಿನ?" ಮೂಗು ಮುರಿದಳು ಸರಸು.

"ಏನೇ ಅದು ಅಂಥಾದ್ದು?" ಕೇಳಿದ ಮೈಲು (ಪೂರ್ತಿ ಹೆಸರು ಮೈಲಾರಯ್ಯ)

"ನೋಡಿ. 'ಜನಮತ' ಸಂಪಾದಕರದು ಆಹ್ವಾನ ಪತ್ರಿಕೆ. ನಾಳೆ ಸಂಜೆ ಸತ್ಕಾರ ಕೂಟ, ಫೋಟೋ ಇಟ್ಟುಕೊಂಡಿದಾರಂತೆ- ಆದರದ ಆಹ್ವಾನ ಕಳಿಸಿದಾರೆ!"

ಮೈಲಾರಯ್ಯ ಸೋತು ಬೇಸ್ತುತಿಂದ ಧ್ವನಿಯಲ್ಲಿ "ಹಿ ಹಿ ಹಿ ಹಿ! ಹಾಗೇ! ಭಲೇ ಸರಸೂ!" ಎಂದ.

ಸರಸುವಿಗೆ ಚಿಕ್ಕಂದಿನಿಂದಲೂ ಬರೆಯುವ ಚಟ ಬೆನ್ನಂಟಿದ್ದು. ಬೇಡವೆಂದರೂ ಗೋಡೆಯ ಮೇಲೆಲ್ಲ ಗೀಚುತ್ತಿದ್ದಳು. ಶಾಲೆಯಲ್ಲಿ ಪಾಠ ಕಲಿಯದಿದ್ದರೂ ಮೇಡಮ್ಮಗಳ ಮೇಲೆ ಕವನ ಕಟ್ಟುವುದರಲ್ಲಿ ನಿಪುಣೆಯಾಗಿದ್ದಳು. ಅವಳು ಬೆಳೆದಂತೆ ಆ ಹುಚ್ಚೂ ಬೆಳೆಯತೊಡಗಿತು. ಮದುವೆಯಲ್ಲಿ ಉರುಟಣೆ ಮಾಡುವಾಗ,"

ಉರುಟಾಣೆ ಮಾಡುವೆನು,
ಹರಟೀಮಲ್ಲ ಮೈಲುಗೆ;
ಒರಟುಗಲ್ಲಕೆ ಅರಿಸಿನವ ತೊಡೆಯುವೆ,
ಕರಟ ಹಣೆಗೆ ಕುಂಕುಮವ ಹಚ್ಚುವೆ,
ಉರುಟು ಕೊರಳಿಗೆ ಗಂಧವ ಪೂಸುವೆ;

ಎಂದೆಲ್ಲ ತನ್ನದೇ ಕವನಗಳನ್ನು ಹಾಡಿದ್ದಳು. ಮಗು ಅತ್ತಾಗ,

"ಮಾಲುಗಣ್ಣಿನ ಮಗಳೆ,
ನಿನಗೇನುಬೇಕು ಬೊಗಳೆ!"

ಎಂದು ಪ್ರಾಸಬದ್ಧವಾಗೇ ಬಯ್ಯುವಳು. ಚಪಾತಿ ಬೇಯಿಸುತ್ತಾ ಸ್ಫೂರ್ತಿ ಬಂದಿತೆಂದರೆ ಅರ್ಧದಲ್ಲೇ ಬಿಟ್ಟು

"ಪದರ ಪದರದ ಚಪಾತಿ,
ಉದರದೊಳಗೆ ನೀ ಹೋಗುತೀ!"

ಎಂದು ಬರೆಯತೊಡಗುವಳು.

ಪಾಪ, ಮೈಲಾರಯ್ಯ ಅವಳನ್ನು ಮಾರ್ಪಾಟುಮಾಡಲು ಹರಸಾಹಸ ಮಾಡಿ ಸೋತು ಸುಮ್ಮನಾಗಿದ್ದ. "ಬೇಡ ಕಣೇ. ನಿನ್ನ ಬರಹಗಳನ್ನ ಪ್ರಕಟಿಸುವ ಸಾಹಸ ಯಾವ ಸಂಪಾದಕನಿಗೂ ಇಲ್ಲ. ಹಾಗೇನಾದರೂ ಮಾಡಿದರೆ ಅವನ ಚಂದಾ ಸಂಖ್ಯೆ ಝುರ್‍ರನೆ ಇಳಿದುಹೋದೀತು!" ಎಂದು ಎಷ್ಟೋ ಬುದ್ಧಿವಾದ ಹೇಳಿದ.

ಆದರೆ ಸರಸು ಆಶಾವಾದಿ. ಬೆದರಿ ಹಿಮ್ಮೆಟ್ಟುವ ಜಾತಕವೇ ಅಲ್ಲ ಅವಳದು. ಕಾಗದ ಮಸಿಯ ವ್ಯಾಪಾರಕ್ಕೆ ನಿರಂತರವಾದ ಬೆಂಬಲವನ್ನು ಕೊಟ್ಟಿದ್ದಳು. ಅಂಚೇ ಇಲಾಖೆಯ ಉತ್ಪನ್ನವನ್ನು ಸಾಕಷ್ಟು ಉದ್ಧರಿಸಿದ್ದಳು. ಹಿಂದಿರುಗಿ ಬಂದ ಹಾಳೆಗಳು ಒಲೆ ಹೊತ್ತಿಸಲು ಮಾತ್ರ ಸಹಕಾರಿಯಾಗಿದ್ದರೂ ಹೆದರಲಿಲ್ಲ. ಮೈಲಾರಯ್ಯ ಮಾತ್ರ ದೂರದ ಆಸೆಯಿಟ್ಟುಕೊಂಡಿದ್ದ, ಒಂದಲ್ಲ ಒಂದು ದಿನ ಸರಸು ಸೋಲನ್ನೊಪ್ಪುವಳೆಂದು!

ಆದರೆ ಅವನ ಆಶೆ ನಿರಾಶೆಯಾಯಿತು. "ಜನಮತ" ಸಂಪಾದಕರು ಅವಳ ಬರಹಗಳನ್ನು ಸ್ವೀಕರಿಸಿ ಪ್ರಕಟಿಸತೊಡಗಿದ್ದರು. ಅವಳ "ಹಾವಿನ ಸಾವು", "ಬಿರುಕು ಬಾಳು" ನಾಟಕಗಳೂ, "ಕಮರಿದ ಕಮಲ", "ಉದುರಿದ ಹಲ್ಲು" ಕವನಗಳೂ, "ಬರೆಯಿಕ್ಕಿದ ಬಾಣಲೆ", "ನರೆತಲೆಯ ನಾರಿ" ಕಿರುಗತೆಗಳೂ ಒಂದೊಂದಾಗಿ ಪ್ರಕಟವಾಗಿದ್ದುವು. ಸರಸು ಹಿಗ್ಗಿ, ಹೆಸರಾಂತ ಬರಹಗಾರ್ತಿಯಾಗಿ, ಸಾಹಿತಿಯಾಗಿ, ಕನ್ನಡ ಸಮ್ಮೇಳನದ ಅಧ್ಯಕ್ಷ ಪೀಠವನ್ನೇರುವ ಸವಿಗನಸನ್ನು ಕಾಣತೊಡಗಿದ್ದಳು!

ಸತ್ಕಾರಕೂಟದ ದಿನ ಮೂರು ಘಂಟೆ ಮುಂಚಿನಿಂದ ಸಿದ್ಧತೆ ಮಾಡತೊಡಗಿದಳು ಸರಸು. ಮನೆಯವರಿಗೆ ಬೆಳಗಿನ ಮಾವಿನ ಕಾಯನ್ನವೇ ರಾತ್ರಿಗೆಂದು ಎಚ್ಚರಿಕೆ ಕೊಟ್ಟಳು. ಉಡುಪನ್ನು ಫೋಟೋಗನುಗುಣವಾಗಿದೆಯೋ ಇಲ್ಲವೋ ಎನ್ನುವ ಸಂದೇಹದ ಮೇಲೆ ಆರು ಸಲ ಬದಲಾಯಿಸಿ, ಕೊನೆಗೆ ಮನೆಯಿಂದ ಹೊರಬಿದ್ದಳು!

ಸೊಗಸಾದ ಸತ್ಕಾರವಾಯಿತು. ಸಹಲೇಖಕ ಲೇಖಕಿಯರ ಪರಿಚಯವಾಯ್ತು. ನಂತರ ಗ್ರೂಪ್ ಫೋಟೋ ಸಹ ಕಂಟೋನ್ಮೆಂಟಿನ ಹೆಸರಾಂತ ಫೋಟೋಗ್ರಾಫರಿಂದ ತೆಗೆಯಲಾಯಿತು. ಸರಸುವಿನ ಮುಖ ವಿಜಯಗಳಿಸಿದ ಸಮರ ವೀರನಂತೆ ಮಿನುಗುತ್ತಿತ್ತು.

ಹೊರಡುವ ಸಮಯವಾಯ್ತು. ಸಂಪಾದಕರು ಮತ್ತೊಬ್ಬಾತನೊಂದಿಗೆ ಅವಳ ಬಳಿಗೆ ಬಂದರು. "ಇವರು ನಿಮಗೆ ತಮ್ಮ ವಂದನೆಗಳನ್ನು ಅರ್ಪಿಸಲು ಬಂದಿದ್ದಾರೆ. ಇವರು 'ಕ್ಯಾಸ್ಟ್ರೊ' (ತಲೆನೋವಿನ) ಮಾತ್ರೆಯ ಕಂಪೆನಿಯ ಪ್ರತಿನಿಧಿಗಳು.

ನಿಮ್ಮ ಲೇಖನಗಳನ್ನು ನಾವು ಪ್ರಕಟಿಸಲು ಪ್ರಾರಂಭ ಮಾಡಿದಂದಿನಿಂದ ಅವರ ವ್ಯಾಪಾರ ಶೇಕಡ ಐವತ್ತರಷ್ಟು ಹೆಚ್ಚಿದೆಯಂತೆ! ಆ ಸಂತೋಷಕ್ಕಾಗಿ ಅವರೇ ಈ ನಿಮ್ಮಂಥ ಲೇಖಕ ಲೇಖಕಿಯರಿಗಾಗಿ ಈ ಸತ್ಕಾರ ಏರ್ಪಡಿಸಿದ್ದು!" ಎಂದರು.

"ಆ?....ಆ!....ಹಾಗಾದರೆ?...."

"ಮರೆತೆ, ಇನ್ನೊಂದು ಮಾತು. ಫೋಟೋ ಮಾತ್ರ ನಾನೇ ಏರ್ಪಾಟು ಮಾಡಿದ್ದು 'ಜನಮತ'ದಲ್ಲಿ ಹಾಕಿಸಲಿಕ್ಕಾಗಿ. ಸಿಟ್ಟಿಂಗ್ ಛಾರ್ಜಿಸ್ (Sitting charges) ನಲವತ್ತು ರೂಪಾಯಿನ್ನ ನೀವು ಹತ್ತು ಜನ ಹಂಚಿಕೊಳ್ಳಬೇಕಾಗುತ್ತೆ ....ತಂದಿದ್ದರೆ, ನಿಮ್ಮ ನಾಲ್ಕು ರೂಪಾಯಿಗಳನ್ನ ಈಗಲೇ ಕೊಟ್ಟು ಬಿಟ್ಟರೆ ತುಂಬಾ ಉಪಕಾರವಾದೀತು!"

ಸಠಸುವಿನ ಸ್ಥಿತಿ....!

—ಸುನಂದಮ್ಮ



ಹಂಗಾದರೇ - ಈ ಮೇಲ್ ಟ್ರೈನ್ ಎಷ್ಟು ಹೊತ್ತಿಗ್ ಹೊರಡುತ್ತೆ?

ಪಾರ್ವತಿಯ ಪಾಂಡಿತ್ಯ

ಅವಳಿಗೆ
ಓದು ಬರಹ ಬಾರದಿದ್ದರೆ ನಾನು ಸಂತಸ ಲಹರಿಲಿ
ಗಂಡ ಹೆಂಡತಿ ಮನೆಯಲಿ ಮುದದಿ ಬಾಳುತಲಿದ್ದೆವು
ಆದರೆ
ಮುನ್ಷಿ ರಾಧಾಕೃಷ್ಣ ರಮಣರ ಗ್ರಂಥವೆಲ್ಲವ, ಪಾರ್ವತಿ
ಓದಿ ತಿಳಿಯುತ ಮನದಿ ಮೆಲುಕುತ, ನನಗೆ ತೀರ ದೂರವೆ!
ಈಗ
ಸಿದ್ಧಬುದ್ಧರ ಈಶವಾಸ್ಯವ ಮುಂಡ ಮಂಡುಕ ಗೀತೆಯ
ತತ್ವವೆಲ್ಲವ ಬಲ್ಲಳವಳು, ನಾನೊ ಕೇವಲ ಇಂಟರು
ಆದ್ದರಿಂದ
ಇಡಾ ಪಿಂಗಲ ಸುಷುಮನಾ ಇವೇ ಅವಳ ಚಿಂತನಾ
ಒಡನೆಗೊಡನೆ ಗಳಿಲ್ಲದಾ ಹುಟ್ಟು ಸೊಬಗೇ ಅವಳದು
ನಿತ್ಯ
ಮೂಗ ತುದಿಯನೆ ಮೂರು ಹೊತ್ತೂ ಕುಳಿತು ದಿಟ್ಟಿಸಿ ನೋಡುತ
ನನ್ನ ಹಸಿವಿಗೆ ಅವಳು ಕೊಡುವಳು ಹಸಿಯ ಗೆಣಸನು ಮೆಣಸನು
ಅಯ್ಯೊ
ಹಾವಿನಂತೆ ತೋರಿ ಬೆದರಿಪ ಹಗ್ಗವೆನ್ನುವಳೆನ್ನನು!
ಬೆಳ್ಳಿಯಂತೆ ತೊಳಗಿ ಮೋಹಿಪ ಶಕ್ತಿಯಂತೆ, ಪಾರ್ವತಿ!
ಅಂತು
ಇಂದೊ ನಾಳೆಯೊ ಹಗ್ಗ ಕಿತ್ತು ಖುಷಿಯ ಕೇಶಕೆ ನಡೆವಳು
ನಾನು ಮಾಯೆ, ಅವಳು ಕನಸು, ಎಂದು ಹೇಳುವಳನುದಿನ
ಆಗ
ಏನುಮಾಡಲಿ, ನಾನು ಗಂಡು! ಅವಳ ಮೋಕ್ಷವು ಅವಳಿಗೆ!
ಓದಲರಿಯದ ಮಂಕುದಿಣ್ಣೆಯ ವರಿಸಿ ತರುವೆನು, ನಾಳೆಗೆ.

—ನಾ. ಕ.

ಮುದುಕನ ಆಸೆ

ಚೈತ್ರದ ಹುಣ್ಣಿಮೆ. ಬೆಂಗಳೂರಿನ ಕರಗದ ಹಬ್ಬವು ಬಂದೇ ಬಂದಿತ್ತು, ದಡದಡನೆ.
ಅಂಗಡಿ ಸಾಲಲಿ ಸಂತಸ ಚಿಮ್ಮಿತ್ತು ; ರೈಲಲಿ ಬಸ್ಸಲಿ ನೂಕೋ ನೂಕಲು !
ಮಾರ್ಕೆಟ್ ಚೌಕ, ಕಾಳಮ್ಮನ ಗುಡಿ, ಧರ್ಮರಾಯನ ಗುಡಿ ಹತ್ತಿರವೂ,
ತಳ್ಳುತ ಸಿಳ್ಳುತ ಕೇಕೆಯ ಹಾಕುತ, ಮಜ್ಜಿಗೆ, ಪಾನಕ, ಕುಡಿಯುತ ಬೆವರುತ
ಜನರೋಡಾಟ, ಜನ ಹಾಡಾಟ, ಬಿಸಿಲೋ ಬೆಂಕಿಯೊ ಸಂದೇಹ.
ಖುಷಿ, ಖುಷಿ, ಎಲ್ಲೂ ! ಹೆಂಗಳ ಕಣ್ಣಲಿ ಮುದ, ನಗು, ಭಕ್ತಿ,
ಗಂಡಸು ಗಹಗಹ ನಕ್ಕಿತು, ಹಿಂಡೆ. ದುಃಖದ ಸೋಂಕೇ ಇರಲಿಲ್ಲ.
ಪೇಟೆ ಕೊಟೆಗಳೆರಡಲ್ಲೂ.

ಆದರೆ, ಅಯ್ಯೊ ! ಯಾರದು ? ಮುದುಕ !

ಗಿಲಿಕಿಯ ಮಾರುವ ಹುಡುಗನ ಹತ್ತಿರ ? ಉದ್ದನೆ ಮೂತಿ, ನನೆದ ಕಪೋಲ,
ಉಟ್ಟಿದ್ದೆಲ್ಲವು ಹರಕಲು ಮುರುಕಲು....ಮುದಿ ಮುದಿ ಮುದುಕ,
ನೂರರ ಹತ್ತಿರ, ಗೋಳಿನ ಉಸಿರು.

ದವನಾ ! ಐಸ್ಕ್ರೀಂ ! ಸೋಡಾ ಲೈಂಜೂಸ್ !

ಯಾರೂ ಅವನನು ಕೇಳುವರಿಲ್ಲವೆ ? ಮಗನೋ ಮೊಮ್ಮಗ ಯಾರೂ ಇಲ್ಲವೆ,
ತುಂಬಿದ ಊರಲಿ ಮುದುಕನ ನೆರವಿಗೆ ? ಗಿಲಕಿಯ ನೋಡುತ ಅಳುವನು ಏಕೆ ?
ಭದ್ರಾವತಿಯಾ ಗೌಡರು ಒಬ್ಬರು, ಅಕೊ !

ಕನಿಕರ ತುಂಬಿದ ನೋಟವ ಬೀರುತ,

"ತಾತಾ" ಎಂಬರು, ಕೇಳಲ್ಲಿ.

"ಗಿಲಕೀ ಬೇಕು, ಕೊಡಿಸಿರಿ ನನಗೆ"

ಎಂಬನು, ಮುದುಕನು ! ಹುಟ್ಟಿದ ಕೂಡಲೆ ತಾಯಿ ಸತ್ತಳು,
ತಂದೆಯದಾರೋ ಗೊತ್ತೇ ಇಲ್ಲ. ತೊಂಬತ್ತೈದು ವರ್ಷಗಳಿಂದ
ಗಿಲಿಕಿಯ ಗಣಗಣ ಹಿಡಿದಲ್ಲಾಡಿಸಿ, ತಿರುಗ ಮರುಗ ಕುಣಿಯಲೆ ಇಲ್ಲ
ಕಿವಿಗಳು ಮಂದ ಕಾಲೋ ಗಡಗಡ, ಪೂರಾ ಶವವೇ ಆಗುವ ಮೊದಲು
ಒಂದನು ಗಿರಗಿರ ಕುಲುಕುವೆನಣ್ಣಾ !....ತಿರುಕನು ನಾನು,
ಎಂಜಲನೆಸೆವರು ತಂಗಳ ಕೊಡುವರು ಹಳಸಿದ ಸಾರನು ಸುರಿವರು, ಅಷ್ಟೆ

ಗಿಲಕಿಯನಾರೂ ಕೊಡುವುದೆ ಇಲ್ಲ....ಗೌಡರೆ! ಕೊಡಿಸಿರಿ, ಗಿಲಕಿಯ ಬೇಗ
ಎಂದನು ಮುದುಕನು, ಕಣ್ಣಲಿ ನೀರು.
ಗೌಡರ ಕಣ್ಣಲು ನೀರೇ ಉಕ್ಕಿತು....ಆಣೆಗೆ ಒಂದು....ಎರಡನು ಕೊಂಡರು,
ಕೊಳ್ಳೋ, ಗಿಲಕೀ, ತಾತಾ, ಎನ್ನುತ, ಬಲಗೈಗೊಂದು, ಎಡಗೈಗೊಂದು,
ನೀಡಿದರಾಗಲೆ....ಹೊರಟರು ಮುಂದಕೆ.
"ಹ ಹ್ಹ ಹ್ಹಾ!" "ಹ ಹ್ಹ ಹ್ಹಾ" ಗಣ ಗಣ ಗಣ ಗಣ ಗಿರ ಗಿರ ಗಿರ ಗಿರ
ಕುಣಿದನು ಮುದುಕನು ನಡುರಸ್ತೆಯಲಿ....
ಕರಗದ ಖುಷಿಯಲಿ ತೇಲಿತು, ನಾದ!
ಕಾದ ಟಾರಲಿ ನಾದದ ಮೋದ, ಬಲು ಉನ್ಮಾದ!
ರಸ್ತೆಯ ಮಧ್ಯದಿ ತಕಿತೋಂ, ತಕಿತೋಂ,
ಜಟಕಾ ಸೈಕಲ್ ಆಟೋರಿಕ್ಷಾ ದನಕರು ಮರಿಶಿಶು ಕುರಿಪಶು
ಪೋಲೀಸ್ ಕಾನ್‌ಸ್ಟೆಬಲೊಬ್ಬನು ಬಂದು, ದಬ್ಬಿದ ಅವನನ್ನಲ್ಲಿಂದ....
ಗಿಲಕಿಗಳನೆರಡನು ಕಿತ್ತನು, ಮೆತ್ತಗೆ....ಕದ್ದದ್ದೆಂದೇ ಬಗೆದನು ಆತ.

—ಕಸ್ತೂರಿ.



"ನೆಗಡೀನೆ?—ರಾತ್ರೆ ಮಲಕ್ಕೊಳೋ ಮೊದಲು ನಾಲ್ಕು ಮೆಣಸಿನಕಾಳು
ದವಡೇಲಿ ಇಟ್ಟುಕೊಂಡು ಮಲಕ್ಕೊ...."

ಟ್ಯಾಕ್ಸಿ

ನನ್ನದೊಂದು ಟ್ಯಾಕ್ಸಿ ಇದೆ. ನಾನೇ ಅದನ್ನು ಡ್ರೈವ್ ಮಾಡುವವನು. ನನ್ನ ಸಾಲ ತೀರಿ ಈಗ ನಾನೇ ಅದರ ಸ್ವಾಮಿ. ಎಂಟು ವರ್ಷವಾಯಿತು, ನಾನೂ ನೋಡುತ್ತಿದ್ದೇನೆ, ಬರಬರುತ್ತಾ ನನಗೆ ಅನ್ನಿಸಿಬಿಟ್ಟಿದೆ, ನಮಗೆ ಇಂತಿಂತಹ ಸಾಮರ್ಥ್ಯಗಳಿರಬೇಕು, ಇಷ್ಟಿಷ್ಟು ಲೈಸನ್ಸ್ ಪಡೆಯಬೇಕು, ಹೀಗೆ ಹೀಗೆ ತಿರುಗಬೇಕು, ಇಂತಹ ಉಡುಪು ಉಡಬೇಕು, ಅಂತ ಪೋಲೀಸಿನವರು ನಿರ್ಬಂಧ ಹಾಕಿರುವಂತೆಯೇ—

ಗಿರಾಕಿಗಳಿಗೂ ನಿರ್ಬಂಧ ಹಾಕಬೇಕೆನಿಸಿದೆ, ನನ್ನ ಅನುಭವದಿಂದ

ಏಕಾಗಬಾರದು ? ನಮ್ಮ ವಾಹನಗಳಲ್ಲಿ ನಮ್ಮೊಂದಿಗೆ ಪ್ರಯಾಣ ಮಾಡುವ ಮಹಾದನಗಳಿಗೂ ಇತಿ, ಮಿತಿ, ರೀತಿ, ನೀತಿಗಳನ್ನು ವಿಧಿಸಬೇಡವೆ ? ಸಾರ್ವಜನಿಕ ರಕ್ಷಣೆಯ ದೃಷ್ಟಿಯಿಂದ ಇದು ಅತ್ಯಗತ್ಯ.

"ಟ್ಯಾಕ್ಸಿ" ಎಂದು ನಯವಿನಯಗಳಿಂದ ಅವರು ಕೂಗಬೇಡವೆ ? ಟ್ರಂಕುಗಳನ್ನೂ ಮಕ್ಕಳನ್ನೂ ಮುದುಕರನ್ನೂ ಜಖಂ ಆಗದೆ ಒಳಕ್ಕೆ ನೂಕುವ ವಿದ್ಯೆಯನ್ನು ಅವರಿಗೆ ಕಲಿಸಬೇಡವೆ ? ಕೂತ ಮೇಲೆ, ಬಾಗಿಲು ಹಾಕಿಕೊಳ್ಳುವಾಗ, ಕೈಬೆರಳು ಒಳಕ್ಕೆ ಎಳೆದುಕೊಳ್ಳುವ ಚತುರತೆ ಅನೇಕರಿಗಿಲ್ಲ. ಒಳಗೆ ಕೂತು, ಎಲೆ ಅಡಿಕೆ ಜಗಿದು, ಗಾಜು ಹಾಕಿದ್ದರೂ, ಹೊರಕ್ಕೆ ಉಗುಳಿ ತಮ್ಮ ಮುಖಕ್ಕೆ ಬಣ್ಣ ಬಳಿದುಕೊಳ್ಳುವವರು ಎಷ್ಟು ಮಂದಿ ಇಲ್ಲ ?

ಶೇಕಡ ೩೦ ಮೋಟಾರ್ ಅನಾಹುತಗಳು ಟ್ಯಾಕ್ಸಿಗಳಿಂದಲೇ, ಎಂಬುದು ನಿಜ. ಆದರೆ, ಆ ಪೈಕಿ, ಶೇಕಡ ೬೦ ಈ ಗಿರಾಕಿಗಳ ಅವಿವೇಕದಿಂದಲೇ ಎಂಬುದು ನಿರ್ವಿವಾದ.

ಹಿಂದಿನ ಸೀಟಲ್ಲೋ ನಮ್ಮ ಎಡಮಗ್ಗುಲಲ್ಲೋ ಕೂತ ಪುಣ್ಯಾತ್ಮ, "ರೈಟ್" "ಅಲ್ಲ ಅಲ್ಲ, ಅಯ್ಯೋ, ಲೆಫ್ಟ್" "ಇನ್ನೂ ಮುಂದೆ" "ಓ ! ಅದು, ಅಲ್ಲ, ಇದು" "ಆ ಗಲ್ಲಿ !" "ಅಲ್ಲ, ಹಿಂದಿನದು" ಎಂದು ಪರದಾಡುತ್ತಿದ್ದರೆ, ನಾವು ನಡುರಸ್ತೆಯಲ್ಲಿ ನಡೆಯುವ ಮುದುಕಜ್ಜಿಯ ಮೇಲೆ ಗಾಡಿ ಹರಿಸುವುದರಲ್ಲೇನಾಶ್ಚರ್ಯ ?

ಗಂಡ "ಹೋಲ್ಡಾನ್" ಅಂತಾನೆ; ಹೆಂಡತಿ "ಬೇಡ, ರೈಟ್" ಅಂತಾಳೆ. ಅತ್ತೆ "ರಾಮೇಶ್ವರನ ಗುಡಿ" ಅಂತಾಳೆ, ಸೊಸೆ, "ಲಾಲ್‌ಬಾಗ್" ಅಂತಾಳೆ; ಗಂಡ, "ಸಾಕು, ಇಳಿಯೋಣ" ಅಂತಾನೆ. ಹೀಗಾದರೆ, ನಮ್ಮ ಪಾಡೇನು? ಬೀದಿಯಲ್ಲಿ ಹೋಗುವವರ ಪ್ರಾಣದ ಪಾಡೇನು?

ನಾವು ಸ್ಪೀಡ್ ಕೊಂಚ ಜಾಸ್ತಿ ಮಾಡಿದರೆ ಸರಿ, ಗಿರಾಕಿ, "ಸ್ಲೋ" "ಸ್ಲೋ" "ಸ್ಲೋ" ಅಂತ ಕಿರಿಚುತ್ತದೆ. "ಅಕ್ಕೊ, ಕತ್ತೆ" "ಹೋ! ಮಗು, ಮಗು" ಅಂತ ಗಾಬರಿ ಪಟ್ಟುಕೊಳ್ಳುತ್ತದೆ ಬೆಂಗಳೂರಲ್ಲಿ ಕತ್ತೆಗಳಿಗೂ ಬುದ್ಧಿ ಬಂದು ಬಿಟ್ಟಿದೆ. ಅಪಾಯಕ್ಕೆ ಸಿಕ್ಕದೆ, ಎಲ್ಲೆಲ್ಲಿ ನಿಂತು ನೊಣ ಹೊಡೆಯಬೇಕು ಅಂತ, ಅವಕ್ಕೆ ಗೊತ್ತಿದೆ. ಚೌಕದ ಮಧ್ಯೆ ನಾಯಿಗಳು ಆರಾಮ ಮಲಗಿರುತ್ತವೆ. ಅವಕ್ಕೆ ಗೊತ್ತು, ಟರ್ನ್ ತೆಗೆದರೆ ತಮ್ಮ ಬಾಲದಾಚೆ ಎರಡಂಗುಲ ಜಾಗ ಉಳಿದೇ ಉಳಿದಿರುತ್ತದೆ ಅಂತ. ಆದರೆ ಈ ಅಹಿಂಸಾ ಗಿರಾಕಿಗಳ ಹೆದರಿಕೆಯ ಕೂಗಿಗೆ ನಾವು ತಬ್ಬಿಬ್ಬಾಗಿ, ನೆಟ್ಟಗೆ ಪೋಲೀಸಪ್ಪನ ಹೆಬ್ಬೆಟ್ಟಿನ ಮೇಲಕ್ಕೆ ಹರಿಸುತ್ತೇವೆ ಮುಂದಿನ ಚಕ್ರವನ್ನು. ಸುಖವಾಗಿ ನಿದ್ದೆ ಮಾಡಬಾರದೆ ಅವರು ಹಿಂದಿನ ಸೀಟ್ ದಿಂಬಿಗೊರಗಿಕೊಂಡು?

ಟ್ಯಾಕ್ಸಿಯಲ್ಲೇ ಕೂತು ಪೊಟ್ಟಣಗಳನ್ನು ಬಿಚ್ಚಿ ತಿಂಡಿ ತಿನ್ನುವುದು ಶಿಷ್ಟಾಚಾರ ವಲ್ಲ ಎಂಬುದು ಅನೇಕರಿಗಿನ್ನೂ ತಿಳಿಯದು. ಹೋಗ, ಬರ, ಟ್ಯಾಕ್ಸಿ ಗೊತ್ತು ಮಾಡುವುದು ತಪ್ಪು ಆಸ್ಪತ್ರೆಗೆ ರೋಗಿಗಳನ್ನು ಸಾಗಿಸುವಾಗ, ಎಂಬುವ ಅನುಭವವೇ ಇಲ್ಲ ಅನೇಕರಿಗೆ.

"ಇಲ್ಲೇ ನಿಂತಿರು, ಐದು ನಿಮಿಷದಲ್ಲಿ ಬರುತ್ತೇವೆ" ಅಂತ ನಮ್ಮನ್ನು ಮನೆ ಬಾಗಿಲಲ್ಲಿ ನಿಲ್ಲಿಸಿ ಒಳಕ್ಕೆ ಹೋಗುತ್ತಾರೆ ಹೆಂಗಸರ ಸಹಿತ. ಆ ಮನೆಯಲ್ಲೂ ಹೆಂಗಸರಿದ್ದರೆ ಹರಟೆಗೆ ಐದು ನಿಮಿಷ ಸಾಕೆ, ಐದು ಗಂಟೆಗಳು ಬೇಡವೆ ಎಂಬ ವಿವೇಚನೆಯೇ ಇರುವುದಿಲ್ಲ.

ಹೇಳಿದಷ್ಟು ಬಾಡಿಗೆ ಕೊಟ್ಟರೆ ಯಾವ ಟ್ಯಾಕ್ಸಿಯವನು ತಾನೆ ತೃಪ್ತಿ ಪಡೆಯುತ್ತಾನೆ? "ಮೀಟರ್ ನೋಡೋ" ಅಂತ ಜಗಳ ತೆಗೆಯುತ್ತಾರೆ ಜಿಪುಣ ಮಹಾಶಯರು! ಈ ವಿಚಿತ್ರಕ್ಕೇನು ಹೇಳುವುದು?

ಇಂತಹ ಅನ್ಯಾಯಗಳನ್ನೆಲ್ಲ ತಪ್ಪಿಸಲು ಟ್ಯಾಕ್ಸಿ ಪ್ರಯಾಣಿಕರಿಗೂ ಹಲವು ಅರ್ಹತೆಗಳನ್ನು ಗೊತ್ತುಪಡಿಸಿ ಅವರಿಗೂ ಲೈಸನ್ಸ್ ಕೊಡುವುದು ಅಗತ್ಯ. ಕೂಗಿದರೆ, ರೇಗಿದರೆ, ತೂಗಿದರೆ, ಚೌಕಾಶಿ ಮಾಡಿದರೆ ತಪ್ಪು ದಾರಿ ತೋರಿಸಿದರೆ ಒಂಟಿ ಶೀನು ಶೀತರೆ, ಅವರ ಲೈಸನ್ಸನ್ನೂ ವಜಾಮಾಡುವುದು ಅವಶ್ಯಕ.

—ಕರೀಂಖಾನ್

ಭರಮಸಾಗರ

ಭರಮಸಾಗರ, ಭರಮಸಾಗರ ಮರೆವೆನೆಂತಾ ಊರನು
ಮರೆವೆನೆಂತಾ ಊರ ಗಾಳಿಯ ಸೊಳ್ಳೆಗಳ ಝೇಂಕರವನು ?
ಮರೆವೆನೆಂತಮೃತವನು ಹಳಿಯುವ ನಿನ್ನ ಹಲಸಿನ ಹಣ್ಣನು
ಮರೆವೆನೆಂತಪ್ಸರೆಯ ಜರೆಯುವ ಕಳೆಯ ಕೇಳುವ ಹೆಣ್ಣನು ? ೧

ಬಂತು ದುರ್ಮುಖಿ, ನಗರ ಜೀವನ ರಂಗು ರಂಗಾಗಿರುವುದು
ಮಧುಮಹೋತ್ಸವ ಗಲ್ಲಿ ಗಲ್ಲಿಯಲೆಲ್ಲ ಜೋರಾಗಿರುವುದು
ಬೀದಿ ಬೀದಿಗು ಸಿನಿಮ ಸರ್ಕಸು ನಾಟಕದ ಸುಖ ತಾಕಿದೆ
ದಿನಕೆ ಸಾಸಿರ ಕೈಯ ಹೊತ್ತಿಗೆ ಬಂದು ನೋದವ ಬೀರಿವೆ ೨

ಆದರೂ ಓ ಭರಮಸಾಗರ! ಮರೆವೆನೇ ನಾ ನಿನ್ನನು
ಹೋದರೂ ಈ ಪ್ರಾಣ ಮರೆಯೆನು ನಿನ್ನ ಸಿಹಿ ಎಳೆನೀರನು
ಬೆಳೆದ ಭತ್ತದ ಹೊಲವ ಮೇಯುವ ಬಿಟ್ಟ ದನಗಳು ಕೊಬ್ಬಿವೆ
ಕಾವ ಹೊಲಗಾಹಿಗಳು ಎಲ್ಲರು ಹೋಟಲಲಿ ಮೈಮರೆತಿರೆ
ತೋಟಗಾರರು ನಿಂತು ಬಸ್ಟಾಂಡಿಲಿ ಹರಟೆಯ ಹೊಡೆವರು
ಕಳ್ಳಕಾಕರು ಕೂಲಿ ಕೇಳದೆ ಬೆಳೆದ ತೋಟವ ಕಾವರು ೩

ಭರಮಸಾಗರ! ಮರೆವೆನೆಂತಾಂ ನಿನ್ನ ಹಿರಿ ಚಳಿಜ್ವರವನು
ಮರೆವೆನೆಂತಾ ಹಳ್ಳಸಾಲಿನ ನಾಯಿನೇರಿಲ ಕಾಯನು
ಅಲ್ಲಿ ಗುರುಮಂದಿರದ ಗೆಳೆಯರು ತತ್ವಮಸಿಯನು ಕುಡಿವರು
ಅರ್ಜಿ ಬರೆದೇ ಊರು ಕಟ್ಟಿದ ಹಿರಿಯಲ್ಲಿರುತಿರುವರು
ಕಾಫಿ ಕುಡಿದೇ ಹೊಲವ ಮಾರಿದ ದುಡಿಮೆಗಾರರ ತವರದು
ಮಾಫಿಯಾಯಿತು ಕರಿ ಬುಡೇಸಿಗೆ ಕಳ್ಳಬಟ್ಟೆಯ ನಿಟ್ಟರೂ ೪

ಅಲ್ಲಿ ಟೀಬಿಯ ಮರಗಳೆಲ್ಲವು ಹಳೆಯ ಭೂತವ ಸಲಹಿವೆ
ಅಲ್ಲಿ ದೇವಾಲಯದ ಜಂತೆಗೆ ಗೆದ್ದಲಿನ ಹುಳ ಹಿಡಿದಿವೆ
ಅಲ್ಲಿ ಬಾವಿಯ ಜಲವೆ ಬತ್ತಿದೆ ಕೆರೆಯ ತೂಬೇ ಮುರಿದಿದೆ
ಅಲ್ಲಿ ನ್ಯಾಯವೆ ಹೆಂಡ ಕುಡಿದಿದೆ, ಸತ್ಯಕೋ-ಮತ್ತೇರಿದೆ ೫

ಭರಮಸಾಗರ ಭರಮಸಾಗರ ನೀನು ಅರಿಯದುದಾವುದು
ಕೊರಮಸಾಗರವೆನಲಿ ಈಜಗ ನಿನಗೆ ಸೋತಿದೆ ಮನವಿದು
ಕೆರೆಗಳೆರಡರ ಕಪ್ಪೆಯಾರ್ಭಟ ಕಿವಿಯಲಿನ್ನೂ ಮೊರೆದಿದೆ
ಭರದಿ ನೀರನು ಸೇದಿ ಈ ಹಳೆ ಬೆನ್ನುಮೂಳೆಯು ಮುರಿದಿದೆ
ಏಳು ಗಂಟೆಗೆ ಘೀಳಿಡುವ ಬಕ ಉಲ್ಲುಕದ ದನಿ ಕರೆದಿದೆ
ಹಾಳು ಬಾಳಿನ ಮರಳು ಕಾಡಲಿ ಓಯಸಿಸಿನೊಲು ಮೆರೆದಿದೆ ೬

ವಿಜಯಲಕ್ಷ್ಮಿಯ ಸಿನಿಮ ಸ್ಕೋಪಿಗೆ ಜನದ ಮಂದೆಯೆ ನುಗ್ಗಲಿ
ವಿಜಯ ಕೆಫೆಯಲಿ ಕಾಫಿ ಹರಿಯಲಿ ಸಗ್ಗದಮೃತವ ಜರೆಯಲಿ
ಭಕ್ತ ದಾಮೋದರವೆ ಲೋಕದಿ ಭರತ ಕೀರ್ತಿಯ ಬೆಳೆಸಲಿ
ವಕ್ರ-ಒಲ್ಲೆನು. ಭರಮಸಾಗರ ನನ್ನ ಮನದಲಿ ನೆಲೆಸಲಿ ೭

ಎಂತು ರಾಮನು ಹಳೆಯ ಯೋಧ್ಯೆಯ ನೆನೆದು ಕಾಡಲಿ ನವೆದನೋ
ಕೃಷ್ಣನಾ ಗೋಕುಲವ ನೆನೆ ನೆನೆತೆಂದು ಪಾಡನು ಪಟ್ಟನೋ
ಪಂಪನೆಂತಾ ಬನವಸೆಯ ಸುಖಕಾಗಿ ಹಳಹಳಿಸಿದ್ದನೋ
ಅಂತೆನಾ ನಿನಗಾಗಿ ಹಂಬಲಿಸುತ್ತ ಬಾಳನು ಕಳೆವೆನು ೮
ಭರಮಸಾಗರ ಮರೆವೆನೆಂತಾಂ ಅಲ್ಲಿ ಆಡಿದ ಆಟವ
ಭ್ರೂವಿಲಾಸವನರಿತ ಚಂಚಲ ಚಟುಲ ಮೋಹದ ನೋಟವ ?

—ಅ. ರಾ. ಸೇ.



"ಸ್ವದೇಶಿ ಸಂಪ್ರದಾಯಗಳಿಗೆ ನಾನು ಯಾವಾಗಲೂ ಉನ್ನತ ಸ್ಥಾನ ಕೊಡುತ್ತೇನೆ!"

ಒಡ್ರ್ರಗಣ್ಣಿನವ

ಯಾಕೊ, ಪೇಟೆಗೆ ಬಂದೆ ?

ಗಡಿಯಾರ ರಿಪೇರಿಗೆ ಕೊಡಬೇಕು....ಒಂದಂಗಡಿ ಹುಡುಕುತ್ತಾ ಇದೀನಿ

ಲೋ ! ನನ್ನ ಮಾತು ಕೇಳು. ಆ ಒಡ್ರ್ರಗಣ್ಣಿನವನು ಇದಾನಲ್ಲಾ, ಅಲ್ಲಿ, ಆ ಗಾಜಿನ ಸ್ಕ್ರೀನ್ ಹಿಂದೆ ...ಅವನಿಗೆ ಮಾತ್ರ ಕೊಡಬೇಡ

ಏಕೆ ?

ನಾನು ಅನುಭವಿಸಿದೇನೆ....ನಾನು ಸಿಕ್ಕಿದ್ದು ನಿನ್ನ ಪುಣ್ಯ....ಇಲ್ಲದೆ ಇದ್ದರೆ ಅವನ ಬಲೆಗೆ ಬೀಳುತ್ತಿದೆಯೊ ಏನೊ ?

ಏನು ಮಾಡಿದ ?

ನೆನೆಸಿಕೊಂಡರೆ ರೇಗುತ್ತೆ ; ಕೊಂಚ, ದೂರ ನಿಂತುಕೊ, ಹೇಳುತ್ತೇನೆ.... ಮಾವ ಕೊಟ್ಟ ಸಾಂಡೋನ ಮಗು ಕೆಳಕ್ಕೆಸೆಯಿತು. ಬಂದೆ, ನಿನ್ನ ಹಾಗೆ, ಪೇಟೆಗೆ. ನನಗೂ ಒಬ್ಬ ಸ್ನೇಹಿತ ಗಂಟು ಬಿದ್ದ....ತೋರಿಸಿದ, ಒಡ್ರ್ರಗಣ್ಣಿನವನನ್ನು ದುರ್ಬಿನ್ ತಗುಲಿಸಿ, ಅಂಗಿ ಬಿಚ್ಚಿ, ಹೊಟ್ಟೆಯೊಳಕ್ಕೆ ದೃಷ್ಟಿ ಹರಿಸಿ, ಒಂಭತ್ತೂಕಾಲು ರೂಪಾಯಿ, ಮುಂದಿನ ಶುಕ್ರವಾರ ಬನ್ನಿ, ಅಂದ.

ಹೋದೆಯಾ ?

ಹೋಗದೆ ?....ಆಚೆ ಸೋಮವಾರ, ಅಂದ....ಸರಿಯಾಗಿ ನಡೆಯುತ್ತದೆಯೋ ನೋಡುತ್ತಾ ಇದೇನೆ, ಅಂದ.

ಸರಿಯಾಗಿ ಸೋಮವಾರ ನಡೆದೆಯಾ ?

ನಡೆದೆ, ಅವನ ಅಂಗಡಿಗೆ....ತಿರುಪತಿಗೆ ಹೋಗಿದಾನೆ, ಅಂದರು.

ತಿರುಪತಿಯಿಂದ ?....

ದಿನವೂ ಹೋಗಿ ಬರುತ್ತಾ ಇದ್ದೆ....ತಿರುಪತಿಯಿಂದ ರಾಮೇಶ್ವರಕ್ಕೂ ಹೋದನಂತೆ, ಶನೀಶ್ವರ....ಹದಿನೈದು ದಿನ ಕಳೆದು ಬಂದ, ಜ್ವರ ಅಂತ ಮಲಗಿದ. ಎದ್ದು ಒಂದು ದಿನ ಭೇಟಿ ಕೊಟ್ಟ.

ಗಡಿಯಾರ ಕೊಡಲಿಲ್ಲವೆ ?

ಒಂದು ಪಾರ್ಟ್‌ಗಾಗಿ ಬೊಂಬಾಯಿಗೆ ಬರೆದಿದೇನೆ....ಶನಿವಾರ ಬನ್ನಿ ಅಂದ.

ಶನಿವಾರ ?

ಸಾಯಂಕಾಲ ಬನ್ನಿ, ರಿಜಿಸ್ಟರ್ಡ್ ಪಾರ್ಸಲ್ ಬರಬಹುದು ಅಂದ.

ಆಮೇಲೆ....?

ಇಂಗ್ಲೆಂಡಿಗೆ ಬರಿದಿರಬಹುದು ಅವರು ಅಂದ..ಅಲ್ಲಿ ಸಿಗದೆ ಇರಬಹುದು ಅಂದ.

ನೀನೇನು ಮಾಡಿದೆ ?

ರೇಗಿದೆ.

ಆಗ ಅವನು ?....

ಗಡಿಯಾರಾನ ಹಾಗೆಯೇ ಕೈಗೆ ಕೊಟ್ಟು, ನನಗಿಂತ ಜೋರಾಗಿ ರೇಗಿದ. ನಿಮಗೋಸ್ಕರ ನಾನು ಎಷ್ಟು ಕಷ್ಟಪಟ್ಟೆ, ಎಷ್ಟು ಖರ್ಚುಮಾಡಿದೆ .. ತಿರುಪತಿಯಲ್ಲೂ ರಾಮೇಶ್ವರದಲ್ಲೂ ನಿಮ್ಮ ಗಡಿಯಾರದ ಪಾರ್ಟು ಸಿಗಲಿ ಅಂತಲೇ ಪ್ರತ್ಯೇಕ ಪೂಜೆ ಮಾಡಿಸಿದೆ....ನಿಮ್ಮ ಹಣೇಬರಹ ನಾನೇನು ಮಾಡಲಿ, ಅಂತ ಕೂಗಿದ .. ದೊಂಬಿ ಸೇರಿತು. ನುಸುಳಿದೆ

ಮೊದಲು ನೀನು ಅವನ ಹತ್ರ ಹೋದದ್ದು ಯಾವಾಗ ?

ಜನವರೀಲಿ.

ನುಸುಳಿದ್ದು ?

ಮೊನ್ನೆ.

ಪರವಾಯಿಲ್ಲ. ಎಲ್ಲರಿಗಿಂತ ಅವನೇ ವಾಸಿ....ಒಡ್ರಗಣ್ಣೆನವನಿಗೇ ಕೊಡು ತ್ತೀನೆ ಇದೇನೆ. ತುಂಬಾ ಥ್ಯಾಂಕ್ಸ್.

—ವಾಚ್ಚು

ಗ್ರಾಮಸ್ಥರು ಹೊಸದಾಗಿ ಕಟ್ಟಿಸಿರುವ ವಿಹಾರ ಭವನದಲ್ಲಿ ಸಭೆ ಸೇರಿ, ತಮ್ಮ ಗ್ರಾಮಕ್ಕೆ ಕುಡಿಯುವ ನೀರು, ಶಾಲೆ, ವೈದ್ಯ ಸೌಕರ್ಯ ಮುಂತಾದವು ಗಳಿಗಾಗಿ ಅರ್ಜಿ ಬರೆದರು.

....ಜುಟ್ಟಿಗೆ ಮೊದಲೇ ಮಲ್ಲಿಗೆ ದಂಡೆ.

ಯಾವುದು ಮೌಲಿಕಭಾವ

ಬೆಂಗಳೂರು ಬಹು ಭಾರೀ ಷಹರು
ಅಲ್ಲಿರುವರು ಲಕ್ಷಾಂತರ ಜನರು
ಮಲ್ಲೇಶ್ವರದಲಿ ಮಾರುತಿರಾಯ
(ಬಿ ಎಸ್ಸಿ ಪರೀ ಕ್ಷೇ! ಅದು ಸಾಯ)
ಕಂಡನು ಜೀವನದೊಳು ಆಯ
ಪ್ರೇಮವೆ ಜಗ ಜೀವನಕಾಧಾರ
ಪ್ರೇಮವೆ ಭೌತಿಕ ವಿಶ್ವದ ಕಾಯ
ಅದರಿಂದಲ್ಲೆ ರವಿಶಶಿ ಭೂಮಿಗಳು
ನೀ ಹಾರಿಕೆ ಅಣು ಭ್ರಮಿಃಸುತಲಿಹವು.

ಆದರೆ ಸಂಶಯ ಕಾಡಿತ್ತವನ
ಪ್ರೇಮದಿ ಸಾಗದೆ ಜೀವನ ಹವನ ?
ಏನಾದರೆ ಏನವ ನಂಬಿದನು
ಪ್ರೇಮವೆ ಮನುಜನ ಮೌಲಿಕಭಾವ
ಸನಿಹದಲಿರುವುದು ಯಶವಂತಪುರ
(ಅಲ್ಲಿ ಸಕ್ಕರೆಗೆ ಸುಂಕವೆ ಇಲ್ಲ
ಎಂಬರು ದಾವಣಗೆರೆ ಜನರೆಲ್ಲ)
ಅಲ್ಲಿರುವನು ಬೀಯೇ ತಮ್ಮಣ್ಣ
ಕಂಡನು ಬಾಳಿನ ಬಗೆ ಬಗೆ ಬಣ್ಣ
ಅವನಿಗರಿಸ್ಟಾಟಲನಲಿ ಪ್ರೀತಿ
ಸ್ನೇಹವೆಂದರವನಿಗೆ ಬ್ರಹ್ಮೇತಿ
ಸ್ನೇಹವೆ ಮನುಜನ ಮೌಲಿಕಭಾವ
ಲೈಂಗಿಕ ವಪ್ಪುದರಿಂದಾ ಲವ್ವು
ಸ್ನೇಹಕೆ ಒಮ್ಮೆಟ್ಟಲು ಕೆಳಗಿಹುದು
ಎಂಬನು ಈ ಯಶವಂತ್ಪುರ ಡಾಂವಾ

ಅವಳೆ ಅತಿ ಸ್ನೇಹದ ಪಾಶಬದ್ಧ
ಕಾಡಲು ಆದನು ಪಾಪರು ಶುದ್ಧ
ಏನಾದರೆ ಏನವ ನಂಬಿಹನು
ಸ್ನೇಹವೆ ಮನುಜನ ಮೌಲಿಕಭಾವ
ಅದು ಇರದಿರೆ ಮನ ಕಾಂಬುದು ಸಾವ

ದಾವಣಗೆರೆ ಸಿಟಿ_ಕೊಬ್ಬಿದ ಹಳ್ಳಿ
ಹಬ್ಬಿದೆ ವ್ಯಾಪಾರದ ಕರಿ ಬಳ್ಳಿ
ಚೌಕೀ ಪೇಟೆಯು ಬೆಲ್ಲದ ಮಂಡಿ
ಅಲ್ಲಿರುವನು ಇದರಾಥರು ಕೊಂಡಿ
ಸ್ನೇಹ ಪರಸ್ಪರರಿಗೆ ಕೊರಳುರುಳು
ಪ್ರೇಮ ವೃಥಾ ಚಿಂತೆಯ ಬಲು ಮರುಳು
ಪ್ರೇಮಕೆ ಪ್ರತಿಫಲವಲ್ಲವು ಪ್ರೇಮ
ಭಗ್ನ ಹೃದಯ ತಳಕೊತ್ತಿದ ಕಾಮ
ಇವು ಮೌಲಿಕ ಭಾವಗಳೇ ? ಅಲ್ಲ

ಮನೆಯಲಿ ಅಡುಗೆಯ ಮಾಡುವರಿಲ್ಲ
ಸೂರ್ಯನು ಪಡುವಲಿ ಗೋಲುವನಲ್ಲ
ಕೆಲಸವೊ ಬಿದ್ದಿದೆ ಕಾಲವೆ ಇಲ್ಲ
ಜೇಬು ಬರಿದು ಸಾಲವು ಸಿಗಲೊಲ್ಲ
ದಿರಲು ಅಂದು ಎಂತಹದೋ ಪ್ರೇಮ
ತೋರುವರಾರೋ ಎಲ್ಲಿಯು ಸ್ನೇಹ
ತೋರಿದರೂ ಯಾರಿಗೆ ಬೇಕಣ್ಣ
ತಲೆಯಲಿ ಚಕ್ರ ಜಠರದಿ ಬೆಂಕಿ
ಜೀವನ ವ್ಯರ್ಥ, ಕುದಿಯುವ ಸುಣ್ಣ

ಆದರಿಂ ಮನುಜನ ಮೌಲಿಕ ಭಾವ
(ಪೇಳುವನಾಥರು ಲಕ್ಷ್ಮಣ ಮಾವ)
ಹಸಿವೋ ಮಗನೇ ! ಅಲ್ಲವೊ ಪ್ರೇಮ
ಹಸಿವೋ ಮಗನೇ ! ಅಲ್ಲವೊ ಸ್ನೇಹ

—ಅ. ಕಾ. ಸೇ.

—o—

ಯಾತ್ರಿಕರಿಗೆ ಸಿಕ್ಕಿದ ಪತ್ರ

ನಾನು ರಾಜ ಚಂದಿ ಜಂಗಲೂರು ಹೋಟೆಲಿನಲ್ಲಿ ತಿಂಡಿ ತಿಂದು ಕಾಫಿ ಕುಡಿಯುತ್ತಾ ಕುಳಿತಿದ್ದೆವು. ನಾವು ಆ ಹೋಟೆಲಿಗೆ ಬರುಕ್ಕೆ ಮುಂಚೆಯೇ ನಾವು ಕುಳಿತಿದ್ದ ಟೇಬಲ್ ಮೇಲೆ ಯಾರೋ ಒಂದು ಲಕೋಟೆ ಬಿಟ್ಟು ಹೋಗಿದ್ದರು. ಚಂದಿ ಆ ಲಕೋಟೆಯನ್ನು ಕೈಗೆ ತೆಗೆದುಕೊಂಡ—ನಾನು ಎಚ್ಚರಿಸಿದ್ದೆ-ಪ್ರಾಯಃಶಃ ಆ ಲಕೋಟೆ—ಆತ ಹೊರಗೆ ಹೋಗಿರಬಹುದು ಅಂತ. ಹಾಗೇ ಇಟ್ಟುಬಿಟ್ಟಿದ್ದ. ಈಗ ಸುಮಾರು ಕಾಲು ಘಂಟೆಯಾಯ್ತು—ಯಾರೂ ಆ ಲಕೋಟೆಗೆ ವಾರಸುದಾರ ಬರಲಿಲ್ಲ.

"ನೋಡೋಣ ಕಣ್ರೋ—ಏನು ಬರೆದಿದೆಯೋ !" ಅಂದ ಚಂದಿ.

"ಪ್ರಾಯಶಃ ಯಾರದೋ ಪ್ರಣಯ ಪತ್ರವಿರಬಹುದು" ಅಂದ ರಾಜ.

ಇಬ್ಬರೂ ನನ್ನ ನೋಡಿದರು

"ಒಳಗೆ ನೋಡಿದ ಹೊರತು ಏನೂ ಹೇಳಲು ಸಾಧ್ಯವಿಲ್ಲ. ಆದರೆ ಬೇರೊಬ್ಬರ ಕಾಗದ ಒಡೆಯುವುದು ಶುದ್ಧ ತಪ್ಪು" ಅಂದೆ—ಅಡ್ಡಗೋಡೆಯ ಮೇಲೆ ದೀಪವಿಟ್ಟ ಹಾಗೆ.

ನನಗೇನೋ ಆ ಕಾಗದ ಏನಿರಬಹುದೆಂದು ಕುತೂಹಲವಿತ್ತು—ಆದರೆ ಬೇರೊಬ್ಬರ ಕಾಗದ ಒಡೆದು ಓದಿದ ಪಾಪ ಕಟ್ಟಿಕೊಳ್ಳಲು ನಾನು ತಯಾರಿರಲಿಲ್ಲ.

"ಈಗೇನು ಹೇಳಿ—ಈ ಲಕೋಟೆ ಒಡೆದು ನೋಡೋಣವೋ ?" ಅಂತ ಪುನಃ ಚಂದಿ ಕೇಳಿದ.

"All right !"

ನಾನು ಮುಖ ಬೇರೆ ಕಡೆ ತಿರುಗಿಸಿ ಕುಳಿತೆ.

ಲಕೋಟೆ ಹರಿದ ಶಬ್ದ ಕೇಳಿಸಿತು.

ಎರಡು ನಿಮಿಷ ಕಾಲ ರಾಜ ಚಂದಿ ಇಬ್ಬರೂ ಲಕೋಟೆಯೊಳಗಿದ್ದ ಕಾಗದ ಬಿಚ್ಚಿ ಓದಿದರು.

"ಲೋ- ಈ ಕಾಗದ ಓದಿ ನೋಡೋ! ಬಹಳ ಸ್ವಾರಸ್ಯವಾಗಿದೆ" ಅನ್ನುತ್ತ ಕಾಗದವನ್ನು ನನ್ನ ಕಡೆ ಎಸೆದ ಚಂದಿ.

"ಯಾರು ಯಾರಿಗೆ ಬರೆದ ಕಾಗದ?" ಅಂತ ಕೇಳಿದೆ. ನಿಜವಾಗಿ ಅದು ಪ್ರಣಯಪತ್ರವಾಗಿದ್ದರೆ ನನಗೆ ಓದುಕ್ಕೆ ಇಷ್ಟವಿರಲಿಲ್ಲ.

"ಓದು —ತಿಳಿಯುತ್ತೆ!" ಅಂದ ರಾಜ.

ಓದಿದೆ- ಹೀಗಿತ್ತು—

"ಮಾವಯ್ಯ—

ನರಸಿಂಹನ ಸಾಷ್ಟಾಂಗ ನಮಸ್ಕಾರಗಳು. ಅದಾಗಿ ನಾನು ನಿಮಗೆ ಹಿಂದೆಯೇ ಸೂಚನೆ ಕೊಟ್ಟಿದ್ದ ಹಾಗೆ ನನಗೆ ಈ ತಿಂಗಳಿಂದ ಕೆಲಸ ಹೋಯ್ತು. ಶಿಂಗ್ರುಗೂ ಕೆಲಸ ಹೋಯ್ತು. ನೀವು ನನಗೆ ಹೆಣ್ಣು ಕೊಟ್ಟು ಮದುವಿ ಮಾಡಿದಾಗ ನನಗಿದ್ದ ವೈಭವವೆಲ್ಲಾ ಖಲಾಸ್ ಆಯ್ತು. ಆಗ ಒಳ್ಳೆ ಯುದ್ಧದ ಕಾಲ. ದೇಶದಲ್ಲೆಲ್ಲಾ ರೇಷನ್ನು ಹತೋಟಿಗಳಿದ್ದವು. ನಾನೂ ಕೂಡ ನಮ್ಮ ದೇಶಸೇವೆಯೆಂದು ಎಣಿಸಿ ಪರದೇಶಿಯರು ವಿಧಿಸಿದ್ದ ಹತೋಟಿಗಳನ್ನೆಲ್ಲಾ ಕೈಲಾದಷ್ಟೂ ಉಲ್ಲಂಘಿಸಿ ಅಲ್ಪ ಸ್ವಲ್ಪ ಪ್ರಯೋಜನ ಪಡೆದೆ—ಇದುವರೆವಿಗೂ ಪಡೆದೆ. ನಮಗೆ ಸ್ವಾತಂತ್ರ್ಯ ಬಂದ ಮೇಲೂ ನನ್ನ ಜಾಗ ಗಡಿಯಾದ್ದರಿಂದ ಟೋಲು ಗೀಲೂಂತ ಸ್ವಲ್ಪ ಬಿರುಸಾಗೇ ಇತ್ತು. ಈಗ—ಟೋಲುಗಳೆಲ್ಲಾ ರದ್ದಾಯಿತು ಇನ್ನು ಕಾನೂನು ಪ್ರಕಾರ ನಾನು ಮನೆಯಲ್ಲಿ ಟೋಲು ವಸೂಲು ಮಾಡುವ ಕಾನೂನು ಇಲ್ಲ—ಅಂದರೆ ನನಗೆ ಕೆಲಸವಿಲ್ಲ ಇನ್ನು ನನ್ನ ತಮ್ಮ—ಶಿಂಗ್ರೂಗೆ, ಇದೇ ಊರಲ್ಲೇ "ಗ್ರಾಮ ಕೈಗಾರಿಕಾ ಸಹಕಾರ ಸಂಘದಲ್ಲಿ" ಇನಸ್‌ಪೆಕ್ಟರ್ ಕೆಲಸ ಸಿಕ್ಕಿತು ಕೆಲಸವೇನಿರಲಿಲ್ಲ. — ಅವರಿವರನ್ನು ಪುಸಲಾಯಿಸಿ, ಸಂಘದವರು ಸಾಲ ಕೊಡುತ್ತಾರೆಂದು ಆಶೆ ತೋರಿಸಿ-ಸಹಕಾರ ಸಂಘಕ್ಕೆ ಆದಷ್ಟೂ ಷೇರುದಾರರನ್ನು ಸೇರಿಸುವುದು. ಶಿಂಗ್ರು ಈ ಕೆಲಸವನ್ನು ಚೆನ್ನಾಗಿಯೇ ಮಾಡಿದ. ಎಲ್ಲರಿಗೂ ಸಾಲ ಸಿಗಬೇಕೆಂಬ ಆಶೆ— ನಾನು ತಾನೂಂತ ಮೀನಿಗೆ ಗಾಳ ಹಾಕುವ ಹಾಗೆ ಷೇರು ತೆಗೆದುಕೊಂಡರು. ಇನ್ನು ನಮ್ಮ ಮನೆ ಒಂದು ಮಾತ್ರ ಬಾಕಿ—ಈಗ ಇದ್ದಕ್ಕಿದ್ದ ಹಾಗೆ ಅವನ ಕೆಲಸ ಚುರುಕಿಲ್ಲವೆಂದು ಹೇಳಿ ಮನೆಗೆ ಕಳುಹಿಸಿದ್ದಾರೆ. ಷೇರು ಕೊಂಡವರೆಲ್ಲಾ ಬೀದಿಯಲ್ಲಿ ಶಿಂಗ್ರೂಗೆ ಹೊಂಚು ಹಾಕುತ್ತಿದ್ದಾರೆ—ಅವನು ಮನೆ ಬಿಟ್ಟು ಈಚೆಗೆ ಬಂದಿಲ್ಲ.

ಈಗ ನೀವೇ ನಮ್ಮ ಕೈಹಿಡಿದು ಯಾವುದಾದರೂ ಕೆಲಸ ಕೊಡಿಸಿ. ನಾನು ಇಷ್ಟು ದಿನ ಟೋಲುಗೇಟನಲ್ಲಿದ್ದರೂ—ಪುನಃ ಯಾವ ಗೇಟೂ ಕಾಯಲಾರೆ. ಆದ್ದರಿಂದ ಬೇರೆ ತರಹ ಕೆಲಸ ನೋಡಿ. ಶಿಂಗ್ರು ಪ್ರಾಯಶಃ ವಿಮಾ ಏಜೆಂಟನಾಗ

ಬಲ್ಲ—ಆದರೆ ಅವನಿಗೆ ಇಷ್ಟವಿಲ್ಲ. ಈಗ ಅವನಿಗೆ ಮತ್ತೊಬ್ಬರ ಸಹಿಗಾಗಿ ಹಲ್ಲು ಗಿಂಜಬೇಕಾದರೆ ಪ್ರಾಣಹೋದ ಹಾಗೆ ಆಗುತ್ತದಂತೆ. ಈ ಪರಿಸ್ಥಿತಿಯಲ್ಲಿ ನೀವೇ ಅವನಿಗೆ—ಸರಿಯಾದ ಅನುಕೂಲವಾದ, ಕ್ಷೇಮವಾದ ಕೆಲಸ ನೋಡಿ ಕೊಡಿಸಿ.

ನೀವು ಯಾವ ಸಮಾಚಾರವನ್ನೂ ಕೂಡಲೆ ತಿಳಿಸಿ—ಹಾಗೂ ಈ ಕಾಗದ ನಿಮ್ಮ ಕೈಗೆ ಸಿಗುವ ಹೊತ್ತಿಗೆ ನಾನು, ಗಂಗು, ರಾಜು, ಶಾಮಿ, ಶಾರಿ, ಶಿಂಗ್ರಿ ಎಲ್ಲರೂ ನಿಮ್ಮಲ್ಲಿ ಬಂದಿರುತ್ತೇವೆ.

ಇಂತಿ,

ನಿಮ್ಮ ಅಳಿಯ

ನರಸಿಂಹ.

ವಿ. ಸೂ :

ಈ ನಡುವೆ ಜಂಗಲೂರಲ್ಲಿ ವಿಪರೀತ ತಗಣಿ ಕಾಟ ಹೆಚ್ಚಿದೆ. ಹೋದ ಬಾರಿ ಚುನಾವಣೆ ಸಮಯಕ್ಕೆ ಇದೇ ರೀತಿ ಹೆಚ್ಚಿತ್ತು. ಈಗಲೂ ಚುನಾವಣೆ ಹತ್ತಿರ ಬಂತೋ ಏನೋ ನನಗೆ ತಿಳಿಯದು. ಅಂತೂ ನಿಮ್ಮ ಮನೆಯಲ್ಲಿ ನಮಗೆ ಬೇರೆ ಕೋಣೆ ಏರ್ಪಡಿಸಿದರೆ—ನಿಮಗೆ ಕ್ಷೇಮ.

—ನ. ಸಿಂ.

ಸಮಾಪ್ತಿ.

ಅಂಗಿಲ್ಲ-ಲಗಾಮಿಲ್ಲ. ನರಸಿಂಹ ಯಾರು, ಅವನ ಮಾವಯ್ಯ ಯಾರು-ಗೊತ್ತಿಲ್ಲ. ಆದರೂ ನನಗೊಂದು ಸಮಾಧಾನವಾಯ್ತು. ನಾನು ಹೆದರಿದ್ದ ಹಾಗೆ ಇದು ಪ್ರಣಯ ಪತ್ರವಲ್ಲ!

ಕಾಗದವನ್ನು ಪುನಃ ಲಕೋಟೆಗೆ ಸೇರಿಸಿ—ಲಕೋಟೆಯನ್ನು ಹಾಗೆಯೇ ಟೇಬಲ್ ಮೇಲಿಟ್ಟು ಹೊರಟೆವು.

ಪುನಃ ತಲಕಾಡು ದಾರಿ ಹಿಡಿದೆವು.

"ಒಳ್ಳೇ Ironical Situation ಕಣಯ್ಯ!" ಅಂದ ರಾಜ.

"ಏನು ?" ಅಂದೆ.

"ನೋಡು-ವರ್ಷ ವರ್ಷದಲ್ಲೂ ಲಕ್ಷಾಂತರ ಜನರಿಗೆ ಕೆಲಸ ಕಲ್ಪಿಸುತ್ತೇವೇ ಅಂತಾರೆ. ಹೀಗೆ ಪ್ರತಿ ದಿನ ಒಂದೊಂದು ಇಲಾಖೇನೇ ಮುಚ್ಚುತ್ತಾ ಬರ್ತಾರೆ. ಮುಚ್ಚಿದರೆ ಮುಚ್ಚಲಿ-ಪಾಪ-ಅದನ್ನೇ ನಂಬಿಕೊಂಡಿದ್ದವರ ಪಾಡು-ನಾಯಿ ಪಾಡು!" ಅಂದ.

"ಹಾಗಲ್ಲ-ಇವರಿಗೆಲ್ಲಾ ಬೇರೆ ಕೆಲಸ ಕೊಡಬಹುದು" ಅಂದೆ.

"ಕೊಟ್ಟಿದ್ದರೆ ನರಸಿಂಹ ಮಾವಯ್ಯನಿಗೆ ಕಾಗದ ಬರೀತಿದ್ನೇ?" ಅಂದ ಚಂದಿ.

ನಾನೇನೂ ಹೇಳಲಿಲ್ಲ.

"ಇರೋ ತೂತುಗಳಿಗೆ ಬಿರಟೆಗಳಿಲ್ಲ–ಹೊಸ ತೂತುಗಳನ್ನ ಮಾಡಿ ಅದಕ್ಕೆ ಆಗದೇ ಇರೋ ಬಿರಟೆ ತಯಾರು ಮಾಡ್ತಾರೆ" ಅಂದ ರಾಜ.

"ಏನು ಹಾಗೆಂದರೆ?" ಅಂತ ಕೇಳಿದೆ. ನನಗೆ ಒಗಟಿನಲ್ಲಿ ಮಾತಾಡಿದರೆ ಬಹಳ ರೇಗುತ್ತೆ!

"ಈಗ ನೋಡೋ–ನರಸಿಂಹ–ಶಿಂಗ್ರು–ಇಂತಹವರಿಗೆ ಕೆಲಸವಿಲ್ಲ. ಇವೆಲ್ಲಾ–ಉಳಿತಾಯಗಳು. ಈ ಉಳಿತಾಯಕ್ಕೆ ಡಬ್ಬಲ್ ಖರ್ಚುಮಾಡಿ 'ಯೋಜನೆ ಪ್ರಚಾರ' ಅಂತ ಕಾಗಕ್ಕನ ಕಥೆ ಹೇಳಿಸ್ತಾರೆ" ಅಂದ.

ಇನ್ನು ಮುಂದೆ ಮಾತನಾಡಿದರೆ ವಿಷಯ–ವಾದಕ್ಕೆ ಬರುತ್ತೆ ಅಂತ ಸುಮ್ಮನಾದೆ. ಮೌನವಾಗಿ ಹಾದಿ ತುಳಿದೆವು.

—ಕೇಫ

—o—

ಹಾದಿಯಲ್ಲಿ ಕೇಳಿಸಿದುದು :

"ನೋಡಯ್ಯ–ಇದುವರೆವಿಗೂ ಸಂಸ್ಕೃತಿ ಪ್ರಸಾರಕ್ಕೆ ಓ ಅಂದರೆ ಠೊ ಅನ್ನೋದು ಬರ್ತಾಯಿರ್ಲಿಲ್ಲ. ಇನ್ನು ಮೇಲೆ ಓ ಅನ್ನೋರು ಕೂಡ ಸಿಗೊಲ್ಲ."

ವೈದ್ಯರಲ್ಲಿ ವಿಷನಿಮಿಷಗಳು :

"ನೋಡಿ ಡಾಕ್ಟ್ರೇ–ನನ್ನ ಎರಡನೇ ಮಗನ್ನ ಡಾಕ್ಟರಾಗಿ ಮಾಡಬೇಕೆಂದಿದ್ದೇನೆ –ಏನು ಹೇಳ್ತೀರಿ? ಮೊದಲನೇ ಮಗ–ನಿಮಗೆ ತಿಳಿದ ಹಾಗೆ ವಿದ್ಯಾ ಕಲೀಲಿಲ್ಲ. ನಮ್ಮ ಮನೆ ಕಸಬು–ಪುರೋಹಿತ್ಯ–ಕಲಿಸಿದೆ."

"ಓಹೋ–ಧಾರಾಳವಾಗಿ ಶಾಸ್ತ್ರಿಗಳೇ–ಮೂರನೇ ಮಗನ ಕೈಲಿ ಒಂದು ಸೋಡ ಡಿಪೋ ಇಡಿಸಿ. ಸಂಬಂಧಪಟ್ಟ ಕಸುಬುಗಳೆಲ್ಲಾ ಮನೇಲೇ ಉಳಿಯುತ್ತೆ."

—ಕೇಫ

ಸಂದೇಹ

ಮೂರನೆ ಮೆಯಿನ್ ? ಆರನೆ ಕ್ರಾಸು ?
ಯಾವುದು ?—ಹೇಳಿರಿ, ಎಂದ, ಪಾಪ
ತೆಲುಗಲಿ. ನಾನೋ ಕನ್ನಡಿಗ....
ತಿಳಿಯಿತು ಮಾತು....ತೆಲುಗೂ ಬರುವುದು
ಹೇಳಲೊ, ಬೇಡವೊ ?....ಅನುಮಾನ
ಆದರು, ನಮ್ಮದು ಕಾಂಪೊಸಿಟ್ ಸ್ಟೇಟು
ಆಂಧ್ರಾ....ಕೇರಳ....ಅಂತಲ್ಲಾ
ಕನ್ನಡನಾಡು, ತಾಳ್ಮೆಯ ಬೀಡು,
ನಯವಿನಯಾದಿಯ ಮೆಚ್ಚಿನ ಗೂಡು....
ಹೇಳಿದೆ....ಆತಗೆ....ತೆಲುಗಲ್ಲೇ
ಎಡಗಡೆ ತಿರುಗಿರಿ, ಬಲಗಡೆ ಹೋಗಿರಿ,
ಎರಡನೆ ಸಂದು, ನಡೆಯಿರಿ ಮುಂದು
ಹೂಂ, ಹೂಂ, ಎನ್ನುತ ಕಿವಿಯನ್ನಾಡಿಸಿ
ತೊಂದರೆ ಕೊಟ್ಟೆ, ಥ್ಯಾಂಕ್ಸ್ ಎಂದನು.
ಮುಂದಕೆ ಹೆಜ್ಜೆಯನಿರಿಸುತ ನಾನು
ನಡೆದನೊ ಇಲ್ಲವೊ....ಅಲ್ಲೇ ನಿಂತ
ಹಿಂದೆಯೆ ಬಂದಾ ಮತ್ತೊಬ್ಬಾತನ
ಕೇಳಿದ ಮತ್ತೆ....ತೆಲುಗಲಿ....ತಿರುಗ
ಮೂರನೆ ಮೆಯಿನ್ ? ಆರನೆ ಕ್ರಾಸು ?
ಯಾವುದು ಹೇಳಿರಿ ? ಎಂದ, ಭಂಡ
ನಾನೇನವನಿಗೆ ಮೋಸನ ಮಾಡಿ
ದಾರಿಯ ತಪ್ಪಿಸೆ, ಸುಳ್ಳೇಳಿದೆನೆ ?
ಮಾತಲಿ, ಧ್ವನಿಯಲಿ, ಮುಖದಲಿ
ಮೋಸದ ಕುರುಹನು ಕಂಡನೆ ಅವನು ?
ಏನನ್ಯಾಯ ? ಯಾವ ನ್ಯಾಯ ?....ಕನ್ನಡದೇಶಕ್ಕಪಮಾನ !

—ಪಾಟೀಳ

ನಾಶಿಕೌದಾರ್ಯ

ಇಲ್ರೀ–ಜಾಗಾ ಇಲ್ಲ–ನೋಡಿ ನೀವೇ ನೋಡಿ ...ಅರೆ ಇಲ್ಲಾಂತ ಹೇಳಿದರೆ ಗೊತ್ತಾಗೊಲ್ವೆ ? ಮತ್ತೆ ನೂಕ್ತೀಯ ಬಾಗಲ್ನ....ಏಯ್ ಯಾರ್ಗಯ್ಯ ಹೇಳ್ತಿರೋದು ....ಹಾಗೆ ದುರುಗುಟ್ಟಿಕೊಂಡು ನೋಡಿದರೆ ದಾರಿ ಬಿಟ್ಟುಬಿಡ್ತಾರೋ....ಇಲ್ರೀ.... ಇಲ್ಲಪ್ಪಾ—ಇಲ್ಲ ಕಣಪ್ಪಾ—ಇಲ್ಲ ಕಣಯ್ಯ....ಅಯ್ಯಯ್ಯೋ ಕಾಲಮೇಲೇ ಟ್ರಂಕು ಹೇರ್ತಿಯಲ್ಲಾ—ರಾಮರಾಮಾ ಹಲಸಿನಹಣ್ಣು ಬೇರೆ–ಕುರೀ ಮರೀನು ತಂದು ಬಿಡು ಹಾಗೂ ರೈಲು ಹೊತ್ಕೊಂಡು ಹೋಗುತ್ತೆ ...ನಿನಗೆ ಬುದ್ಧಿ ಗಿದ್ಧಿ ಇದೆಯೋ ಇಲ್ವಯ್ಯಾ—ಮೈಮೇಲೆ ಕೂತ್ಕೊತೀಯಲ್ಲ– ತೆಗಿಯಯ್ಯ ಈ ಹಾಳು ಹಲಸಿನ ಹಣ್ಣು ನನ್ನ ತೊಡೆ ಮೇಲಿಂದಾ....ಅಬ್ಬಬ್ಬಬ ಕಾಲು ಹೋಯ್ತು—ಸುಡೂಗಾಡು ಈ ಟ್ರಂಕಿನಲ್ಲಿ ಏನಿದೆಯೋ ಹಾಳು .. ನಾನು ಹೇಳ್ತಿರೋದು ನಿಮ್ಮ ತಲೆಗೆ ಹತ್ತುತಿಲ್ಲಾಂತ ಕಾಣತ್ತೆ....ಅಬ್ಬಬಬ....ತೆಗೀರಿ ನಿಮ್ಮ ಹಾಳು ಮೊಳಕೈ ಆಗಿನಿಂದ ಒಂದೇ ಸಮ ತಿವಿತಿದ್ದೀರ...."

—ಸುಸ್ತಾಗಿ ಸರಿದುಕೊಂಡೆ–ಆರಾಮವಾಗಿ ಆಕ್ರಮಿಸಿ ಸೀಟನಿಂದ ನನ್ನ ಹೊರತಳ್ಳಿದ ಆ ಪ್ರಪಂಚ ಪ್ಯಾಸಿಂಜರ. ಅರಣ್ಯರೋಧನವಾಯ್ತು ನನ್ನ ಪ್ರತಿಭಟನೆ.

"ಆಹಹಹ...." ಎಂದು ನನ್ನ ಕೈಲಿದ್ದ ಕೊರವಂಜಿ ತೆಗೆದುಕೊಂಡು ಗಾಳಿ ಹಾಕಿಕೊಂಡ. ಬಂಡಿ ಕಿಕ್ಕಿರಿದಿತ್ತು. ಇಕ್ಕೆಲವೂ, ಪಕ್ಕಕ್ಕೆ ಇದ್ದ ಮಂದಿಯಿಂದ ಒತ್ತಿ ಪಕ್ಕೆಲುಬುಗಳು ಮುರಿಯುವಂತಹ ನೋವು ಅಂಥಾದ್ದರಲ್ಲಿ ಈ ಬಹಾದ್ದೂರ ತನ್ನ ಹಲಸಿನಹಣ್ಣು ಟ್ರಂಕು–ತಾನು ಎಲ್ಲರಿಗೂ ಜಾಗ ಮಾಡಿಕೊಂಡು, 'ಮೂವತ್ತು ಮಂದಿ ಕೂಡ್ರುವುದು' ಎಂದು ಬರೆದಿದ್ದ ಬೋಗಿಯಲ್ಲಿ ಅರವತ್ತೆರಡನೆಯವನಾಗಿ ಬಂದು ಕೂತಿದ್ದ.

ಕೆಟ್ಟ ಕಣ್ಣಿಂದ ನನ್ನ ಮೂಗು ನೋಡಿದ. ನಾನು- ನಾಚಿ ಒರಸಿಕೊಂಡೆ. ಹಾಗೆಯೇ ಆಚೆ ಈಚೆ ಎದುರು ಬದುರು ಇದ್ದ ಪ್ರಯಾಣಿಕರ ಮೂಗುಗಳನ್ನೆಲ್ಲಾ ಪರೀಕ್ಷಕ ದೃಷ್ಟಿಯಿಂದ ವೀಕ್ಷಿಸಿದ ಆ ಬಹದ್ದೂರ.

"ನಿಮ್ಮ ಹೆಸರು" ಎಂದೆ.

"ಎಲ್. ಬಿ. ಶಾಸ್ತ್ರಿ" ಎಂದ.

— ಲಾಲ್‌ಬಹದೂರ್ ಶಾಸ್ತ್ರಿ ಇರಬಹುದೆ ಈತಾ? ಎಂದು ಒಂದು ಕ್ಷಣ ಸ್ಥಂಭಿಭೂತನಾದೆ. ಮಫ್ತಿಯಲ್ಲಿ ಟಿಕೆಟ್ ಇಲ್ಲದ ಪ್ರಯಾಣಿಕರನ್ನು ಪತ್ತೆ ಹಚ್ಚುವ ಮ್ಯಾಜಿಸ್ಟ್ರೇಟರಾಗಿ ಲಾಲ್‌ಬಹದ್ದೂರರೆ ಬಂದಿರಬಹುದೆ? ಎಂದು ಶಂಕೆಯೂ ಆಯಿತು.

"ಆಂ....ಎಲ್. ಬಿ. ಅಂದರೆ?"

"ಲಾಲ್‌ಗುಡಿ ಬಲರಾಮಶಾಸ್ತ್ರಿ — ದಸರಾಕ್ಕೆ ಮೈಸೂರು ಹತ್ತಿರ ಇರೊ ತಾಯೂರಿಗೆ ಹೋಗ್ತಿದ್ದೀನಿ."

"ತಾಯೂರಲ್ಲಿ ಏನಿದೆರ‍್ರೀ....ಮೈಸೂರಲ್ಲಿ ದಸರೆ...."

—ಶ್ರೀರಂಗಪಟ್ಣ ಬಂತು. ಒಂದು ಇಡೀ ಗುಂಪೇ ನಾವು ಇದ್ದ ಡಬ್ಬಿಗೆ ಮುತ್ತಿಗೆ ಹಾಕಿತು. ಹಿಂದಿನ ಸ್ಟೇಷನ್ನಿನಲ್ಲಿ ಹಾಗೇ ಅಂದಾಗ ಬಹದ್ದೂರು ಶಾಸ್ತ್ರಿ ಬಂದು ಸೇರಿದ್ದು. ಮತ್ತೆ ರೈಲು ಚಲಿಸಿದಾಗ ಮುಂದಿನ ಸ್ಟೇಷನ್ನಲ್ಲಿ ಒಂದು ನರಪಿಳ್ಳೆಯನ್ನೂ ಬಾಗಿಲು ಹತ್ತಿ ಒಳಕ್ಕೆ ಬರದಂತೆ ನೋಡಿಕೊಳ್ಳಬೇಕೆಂದು ಎಲ್. ಬಿ. ಶಾಸ್ತ್ರಿಯೇ ಹೇಳಿದ್ದ.

"ನಡೀರಿ—ಇಲ್ಲ-ನಾವೇ ಸಾಯ್ತಿದ್ದೀವಿ-ಅರೆ-ನೀವೇನು ಮನುಷ್ಯರೋ...."

—ಮತ್ತೊಂದು ಯುದ್ಧ. ಡಬ್ಬಿಯೊಳಗಿನವರಿಗೆ-ಹೊರಗಿನಿಂದ ಬಂದು ನುಗ್ಗಿದ ದಸರಾ ಪ್ರಯಾಣಿಕರಿಗೆ.

"ಬಿಡ್ರೀ—ನಿಮ್ಮಪ್ಪಂದಲ್ಲ ರೈಲು."

"ಅಲ್ಲ ನಿಮ್ಮ ಅಪ್ಪಂದು—ಹೋಗಯ್ಯಾಂದ್ರೇ...."

ಆನೆ ಢಿಕ್ಕಿ ಹೊಡೆಯಿತೇನು-ರೋಡ್ ರೋಲರ್ ತಳ್ಳಿತೇನು? ಇಲ್ಲ ಎಲ್. ಬಿ. ಶಾಸ್ತ್ರಿ ನಮ್ಮನ್ನು ತಳ್ಳಿಕೊಂಡು ಬಾಗಿಲ ಬಳಿ ಬಂದಿದ್ದ.

ಯಾರೂ "ಬರಬೇಡಿ ...... ದಾರಿ ಬಿಡಿ" ಎಂದು ಕಿಟಕಿಯಲ್ಲಿ ತಲೆ ಹಾಕಿ ಕ್ಯಾಕರಿಸಿದಾಗ ಬಾಗಿಲ ಬಳಿ ನುಗ್ಗುತ್ತಿದ್ದ ಜನಜಂಗುಳಿ ಸರಿಯಿತು. ಶಾಸ್ತ್ರಿ ಉಗುಳಿದ. ಇವನನ್ನು ಶಪಿಸಿ ಜನ ಮತ್ತೆ ನುಗ್ಗಿದರು. ಬರುವವರನ್ನು ಹಚಹಚ ಅನ್ನಲು ನಾನೂ ಶಾಸ್ತ್ರಿ ಜೊತೆ ಸೇರಿಕೊಂಡೆ.

"ನೀಮಗು ಜಾಗ ಇಲ್ಲ."

"ನೀವೂ ಆಚೆ ಬಂಡಿಗೆ ಹೋಗಿ."

"ಹಾಂ....ಹುರ್‍ರ್ರೀ....ನೀವು ನೀವು ಬನ್ನಿ ಒಳಕ್ಕೆ" ಎಂದು ಪಕ್ಷಪಾತ ಪಾಳೆಗಾರನಂತೆ ಮುಂದೆ ನಿಂತ ಗುಂಪಿನಿಂದ ಒಬ್ಬನನ್ನು ಮಾತ್ರ ಆರಿಸಿ ಒಳಕ್ಕೆ ಅವನ ಚೀಲದ ಸಮೇತ ಎಳೆದುಕೊಂಡ. "ಘೂಥತ್" ಎಂದು ರೈಲು ಕೂಗಿತು. ಜನ ಆಚೆ ಡಬ್ಬಿಯಲ್ಲಿ ತೂರಿಕೊಂಡರು.

"ಇದು ಅನ್ಯಾಯ"— ಎಂದು ನಾನು ಶಾಸ್ತ್ರಿಯನ್ನು ಕುಕ್ಕಿದೆ.

"ಯಾವುದು ?" ಅಂದ ಎಲ್. ಬಿ. ಎಸ್.

"ಅಷ್ಟು ಜನದಲ್ಲಿ ಈತನನ್ನೇ ಆರಿಸಿ ಪಕ್ಷಪಾತ ತೋರಿಸಿದ್ದು. ಈತ ನಿಮಗೆ ಗೊತ್ತೇ ?"

"ಇಲ್ಲ ಈತನ ಮೂಗು ಮಾತ್ರ ನನಗೆ ಪರಿಚಿತ" ಎಂದಾಗ ಆತ "ಆಂ ಅದು ಹ್ಯಾಗೆ-? ಸಾಧ್ಯ ?" ಎಂದ.

"ಸ್ವಾಮಿ ಮಂಗಳೂರೋ ?" ಎಲ್. ಬಿ ಎಸ್.

"ಅಲ್ಲ" ಆಗಂತುಕವಾಣಿ.

"ಮದರಾಸೊ ?"

"ಸುಡಿ ಆ ಪುಡಿ"

"ಮತ್ತೇೀೀೀ...."

"ತಾಯೂರು ಉಂಡೆ ನಶ್ಯ ಅದರ ಮುಂದೆ ಎಲ್ಲಾ ಘಾಟೀ ಇಲ್ಲ."

"ಹುರ್‍ರ್ರೀ....ಎಲ್ಲಿ ಒಂದು ಉಂಡೆ ಹಾಗನ್ನಿ" ಎಂದು ಶಾಸ್ತ್ರಿಗಳೂ ಹೊಸಬನೂ ಮೂಗು ಮೂಗು ಉಜ್ಜಿಕೊಂಡು ಸಂತೋಷದಿಂದ ಹತ್ತಿರದ ಬಳಗದಂತೆ ಆಡಿದರು.

"ನಾನೂ ತಾಯೂರಿಗೇ ಹೊರಟಿದ್ದೆ-ನಶ್ಯಕೊಂಡು ಮೈಸೂರಿಗೆ ಮತ್ತೆ ಬರೋಕೆ ಹೊರಟಿದ್ದೆ."

"ಎಲ್ಲಿ ಒಂದುಂಡೆ ಕೊಡಿ" ಎಂದು ಆಗಂತುಕನೇ ಎಲ್. ಬಿ. ಎಸ್ ಗೆ ಕೈ ಚಾಚಿದ.

"ಆಂ....ನಿಮ್ಮ ಹತ್ರ ಉಂಡೆ ನಶ್ಯ ಇಲ್ವೆ ?"

"ಎಲ್ಲಿ ಬಂತೂ—ನಿಮ್ಮ ಮೂಗು ನೋಡೇ ಬಂಡೀಗೆ ಬಂದೆ."

"ಅಯ್ಯೋ ರಾಮಾ—ನಿಮ್ಮ ಮೂಗು ನೋಡಿ ನನ್ನ ನಾಶಿಕದ ಕಡತ ತಡೀಲಾರದೆ ನಿಮಗೆ ಜಾಗಾ ಕೊಟ್ನಲ್ರೀೀೀ" ಎಂದು ಕಿಟಕಿಯಿಂದ ಅವನನ್ನು ಎಸೆಯಲು ಹೊರಟಿದ್ದ ಶಾಸ್ತ್ರಿ. ಇಬ್ಬರೂ ಪೇಚಾಡಿ-ವಿಲಿವಿಲಿ ಒದ್ದಾಡುವುದು ಕಂಡು-ಶಾಸ್ತ್ರಿಗೆ ತಕ್ಕ ಶಾಸ್ತಿ ಆಯ್ತು ಎಂದು ಒಳಗೇ ನಕ್ಕೆ. ರೈಲು ಮೈಸೂರು ಸೇರಿತು.

—ದಾಶರಥಿ ದೀಕ್ಷಿತ್

ಅಂತಃಕೋರಡಿ

ಹೊರಬಾಗಿಲ ಬಳಿ ಇಬ್ಬರು ಸೈಂಧವನಂತಿದ್ದ ಜವಾನರು. ಅವರನ್ನು ದಾಟಿ ಹೋದರೆ ಒಳಬಾಗಿಲ ಬಳಿ ಇನ್ನಿಬ್ಬರು ಧಡೂತಿ ಜವಾನರು. ಬಾಗಿಲ ಪಕ್ಕದ ಗೋಡೆಯಮೇಲೆ "No Admission" ಎಂಬ ಕೆಂಪು ಅಕ್ಷರದ ಬೋರ್ಡು! ಬಾಗಿಲು ಮುಚ್ಚಿತ್ತು.

ಇಷ್ಟು ಬಂದೋಬಸ್ತಾಗಿತ್ತು ಆ ಅಂತಃಕೊಠಡಿ. ಅದರಲ್ಲಿ ಒಂದು ಮೇಜು ಸುತ್ತಲೂ ಆರುಜನ ಅಪರವಯಸ್ಸಿನವರು ಕುಳಿತಿದ್ದಾರೆ. ಒಬ್ಬಾತ ಪ್ರಾಣಿಶಾಸ್ತ್ರ ಪಂಡಿತ. ಆತನ ಹೆಸರು ದೇಶಕ್ಕೇ ಗೊತ್ತು. ಒಂದಲ್ಲ ಒಂದುದಿನ ಆತ ನೋಬೆಲ್ ಪಾರಿತೋಷಕವು ಭಾರತದತ್ತ ಬರುವಂತೆ ಮಾಡುತ್ತಾನೆ ಎಂದೇ ಜನರ ನಂಬಿಕೆ. ಇನ್ನೊಬ್ಬಾತ ಗಣಿತಶಾಸ್ತ್ರ ಪಾರಂಗತ. ನಕ್ಷತ್ರಗಳ ತೂಕವನ್ನೇ ಮಾಡುವ ಸಾಹಸಿ. ಮಗುದೊಬ್ಬ ಸಸ್ಯಶಾಸ್ತ್ರ ವಿಶಾರದ. ಗಿಡಗಳ ಬೇರುಗಳೆಲ್ಲವೂ ಇವನ ಮನಸ್ಸಿನಲ್ಲೇ ನಾಟಿದಂತಿರುವವ. ನಾಲ್ಕನೆಯಾತ ಚರಿತ್ರಾ ಪಂಡಿತ ಶಿರೋಮಣಿ. ಐದನೆಯವ ಹೆಸರಾಂತ ದೇಹರಚನಾ ಪ್ರೊಫೆಸರು. ಆರನೆಯವ ವೇದಾಂತ ಕೇಸರಿ.

ಅಷ್ಟು ಜನರೂ ಕುಳಿತು ಪರೀಕ್ಷಾ ಫಲಿತಾಂಶಗಳನ್ನು ಮೊದಲ ಹಂತದಲ್ಲಿ, ಗುಟ್ಟಾಗಿ, ಕೂಡಿ ಒಟ್ಟು ಫಲವನ್ನು ಕಂಡುಹಿಡಿಯುವ ಕೆಲಸದಲ್ಲಿ ಮಗ್ನರಾಗಿದ್ದರು.

ಒಂದನೇ ಪೇಪರಿನಲ್ಲಿ, ಇಂತಹ ನಂಬರಿನವನಿಗೆ, ಇಷ್ಟು ಮಾರ್ಕು. ಅವನಿಗೆ ಪ್ರಯೋಗದಲ್ಲಿ ಇಷ್ಟುಮಾರ್ಕು, ಎರಡನೇ ಪೇಪರಿನಲ್ಲಿ ಇಷ್ಟುಮಾರ್ಕು. ಅಷ್ಟನ್ನೂ ಒಟ್ಟುಗೂಡಿಸಿದರೆ ಮೊದಲನೆ ಮೊತ್ತ ಇಷ್ಟು, ಭೇಟಿ ಪ್ರಶ್ನೋತ್ತರ ಪರೀಕ್ಷೆಯಲ್ಲಿ ಇಷ್ಟು ಮೊತ್ತ, ಇದು ಎರಡನೆ ಮೊತ್ತ. ಮೊದಲ ಮೊತ್ತ ಎರಡು ಮೊತ್ತ ಕೂಡಿಸಿದರೆ ನಿಮ್ಮಳ ಮೊತ್ತ.

ಇದೇ ಈ ದಿಗ್ದಂತಿಗಳು ಮಾಡುತ್ತಿದ್ದ ಮಹಾಕಾರ್ಯ. ಒಬ್ಬಾತ ಓದುವುದು ಮಿಕ್ಕವರು ಕೂಡಿ ಉತ್ತರ ಹೇಳುವುದು. ಮೊದಲಾತ ಬರೆದುಕೊಳ್ಳುವುದು. ಇದೇ ರೂಢಿ.

ಆದರೆ ಒಂದೊಂದು ಸರ್ತಿಯೂ ಈ ಕೂಡುವಾಗ ಐದು ಉತ್ತರಗಳು ಬರುತ್ತಿದ್ದವು. ತಿರುಗಿ ಕೂಡಿದರೆ ಇನ್ನು ಐದು ಬೇರೆ ಬೇರೆ ಉತ್ತರಗಳು ಬರುತ್ತಿದ್ದವು. ಆರು ಜನರೂ, ಇದನ್ನು ಒಂದು ಉತ್ತರಕ್ಕೆ ತರಬೇಕಾದರೆ ಅರ್ಧಗಂಟೆಯಾಗುತ್ತಿತ್ತು. ಆರು ಜನರ ತಲೆಗಳಲ್ಲಿರುವ ಆರುನೂರ ಕೂದಲುಗಳಲ್ಲಿ ಅರವತ್ತು ನೆಲಕ್ಕೆ ಬಿದ್ದು

ಹೋಗುತ್ತಿದ್ದುವು. ಕೈಬೆರಳಿನ ಹರಿತವಾದ ಉಗುರು ಮೊಂಡಾಗಿಹೋಗುತ್ತಿದ್ದಿತು. ಶಾಸ್ತ್ರಪ್ರವೀಣರಿಗೆ ಕೊಡುವ ಲೆಕ್ಕ ಅಷ್ಟು ಸಾಹಸಮಯ!!

ಬರೆಯುತ್ತಿದ್ದ ಮೊದಲಾತ ಸುಧಾರಿಸಿಕೊಳ್ಳಲು ಕೊಠಡಿಯ ಕಿಟಕಿಯ ಹತ್ತಿರ ಬಂದ. ಹಾಕಿದ್ದ ಕಿಟಕಿಯನ್ನು ತೆಗೆದು ಹೊರಕ್ಕೆ ದೃಷ್ಟಿಯನ್ನು ಹೊರಳಿಸಿದ. ದೂರದ ಮರದ ಕೆಳಗೆ ಇಂಟರಿನಲ್ಲಿ ಮೂರುಬಾರಿ ನಪಾಸಾಗಿದ್ದ ನನ್ನನ್ನು ಕಂಡ. ಆತನ ಮನೆಗೆ ಆತನ ನಾಲ್ಕುವರ್ಷದ ಮಗಳಿಗೆ ಲೆಕ್ಕದ ಪಾಠಕ್ಕೆ ನಾನು ಹೋಗುತ್ತಿದ್ದುದನ್ನು ಆತ ಮರೆತಿರಲಿಲ್ಲ! ಕಿಟಕಿಯಿಂದಲೇ ಚಪ್ಪಾಳೆ ಹೊಡೆದು ನನ್ನನ್ನು ಕಿಟಕಿಯ ಹತ್ತಿರಕ್ಕೆ ಕರೆದ. ಒಂದು ಗಂಟೆ ಸ್ವಲ್ಪ ಲೆಕ್ಕ ಮಾಡಿಕೊಡುತ್ತೀಯಾ ಎಂದು ಗೋಗರೆದು ಕೇಳಿದ. ಶಿರಸಾ ವಹಿಸಿ ಮಾಡುತ್ತೇನೆ ಎಂದೆ. ಆತನೇ ಅಂತಃಕೊಠಡಿಯಿಂದ ಹೊರಬಾಗಿಲ ಬಳಿಗೆ ಬಂದು ನನ್ನನ್ನು ಅತಿಥಿಯೋಪಾದಿಯಲ್ಲಿ ಒಳಕ್ಕೆ ಕರೆದುಕೊಂಡು ಹೋದ.

ಅಲ್ಲಿದ್ದ ಉಳಿದೈವರಿಗೆ ನನ್ನ ಪರಿಚಯ ಮಾಡಿಸಿಕೊಟ್ಟ. ಇವನ ಕೈಲಿ ಈ ಕಾಗದಗಳನ್ನು ಒಂದು ಗಂಟೆ ಬಿಡೋಣ ನಂತರ ಅವ ಮಾಡಿದ್ದನ್ನು ನಾವು ಪರೀಕ್ಷಿಸೋಣ. ಅಲ್ಲಿನ ತನಕ ನಾವು ಈ ಕಡೆ ಇಸ್ಪೀಟ್ ಆಡೋಣ ಎಂದ. ಎಲ್ಲರೂ ಒಪ್ಪಿದರು.

ಆ ಷಟ್ಪಂಡಿತರೂ ಇಸ್ಪೀಟಿಗೆ ತಮ್ಮ ಸಂಭಾವನೆಯನ್ನೇ ಪಣವನ್ನಾಗಿಸಿಟ್ಟು ಆಡಹತ್ತಿದರು.

ಮುನ್ನೂರು ಜನ ವಿದ್ಯಾರ್ಥಿಗಳ ಪರೀಕ್ಷಾ ಫಲಿತಾಂಶವನ್ನು ಇಂಟರ್ ನಪಾಸಾದ ನಾನು ಮೂವತ್ತೇ ನಿಮಿಷದಲ್ಲಿ ತಪ್ಪಿಲ್ಲದೆ ಕೊಡಿಸಿಟ್ಟೆ.

"ಆಯಿತು ಸಾರ್" ಎಂದೆ.

ಇನ್ನೊಂದು ಸರ್ತಿ ನೋಡು! ಇನ್ನೊಂದಾಟ ಆಡ್ತೇವೆ ಎಂದರು.

ಇನ್ನೊಂದು ಸಾರಿ ನೋಡಿದೆ. ಏನೂ ತಪ್ಪಿರಲಿಲ್ಲ.

ಹಾಗಂದೆ.

ಇನ್ನೂ ಒಂದು ಸಾರಿ ನೋಡು ಎಂದರು.

ಇನ್ನೂ ಒಂದು ಸಾರಿ ನೋಡಿದೆ. ತಪ್ಪು ಸಿಗಲಿಲ್ಲ. ಹಾಗಂದೆ.

"ಮತ್ತೊಂದು ಬಾರಿ" ಎಂದರು. ಆಗ "ತಪ್ಪು ಇದೆಯೋ ಏನೋ ಸಾರ್" ಎಂದೆ.

ಹಾಗಾದರೆ ಆಟ ಸಾಕು ಎಂದು ಅವರು ತಮ್ಮಾಟ ಪೂರ್ಣ ಮಾಡಿ ನಾನು ಮಾಡಿಟ್ಟಿದ್ದ ಪಟ್ಟಿಗೆ ಎಲ್ಲರೂ ಸಹಿ ಹಾಕಿ ಲಕ್ಕೋಟೆಯಲ್ಲಿಟ್ಟು, ಅರಗೊತ್ತಿ, ಮೇಲಕ್ಕೆ ಕಳಿಸಿದರು.

ಬಾಯಿ ತುಂಬ ಆಶೀರ್ವದಿಸಿ ಯಾರಿಗೂ ಹೇಳಬೇಡ ಎಂತ ಬುದ್ಧಿವಾದ ಹೇಳಿ ನನ್ನನ್ನು ಕಳಿಸಿದರು.

—ನಪಾಸ್ ಪ್ರಕಾಶ್

ಬುದ್ಧ

ಎಡ್ತಿ ಮೊಗೀನ್ ಬುಟ್ಟು
ಸಿಂವಾಸ್ನ ಬುಟ್ಟುಬುಟ್ಟು
ಕಾಡ್ಗೋದೆ ನಮ್ಮಪ್ಪ ಬುದ್ಧ
ಸಾಸ್ವತ ಸುಕಾ ಕಂಡಿ
ಒಳ್ಳೇ ಬೆಳಕಿನ್ ಕಂಡಿ
ನೀನಾದೆ ಲೋಕಕ್ಕೆ ಬುದ್ಧ.

"ಆಡೋ ಮಾತ್ನಲ್ಲೂನೂ
ಮಾಡೋ ಕೆಲಸ್ದಲ್ಲೂನೂ
ಮನಸು ಮೊದಲಾಗಿರ್ಲಿ ಸುದ್ಧ!"—
"ಇವತ್ ನಮ್ ಮನಸೆಂಗೊ
ನಾಳಿನ್ ಜೀವ್ನ ಅಂಗೆ!—
ಇಂತೋವೆ ನಿನ್ ಮಾತು ಬುದ್ಧ!

ದರ್ಮದ್ ದಾರಿ ನಿಂದು
ನಮಿಗ್ಯಾಕೋ ತಕಲೀಪು!
–ಇದ್ಕೇನ್ ಮಾಡಾದ್ಯೋಳು ಬುದ್ಧ!
ನಿನ್ ಯೆಸರನ್ ಯೋಳ್ತೀವಿ
ನಾವ್ ಮಾಡಾದ್ ಮಾಡ್ತೀವಿ
ನೆಗಬೇಡ ನಮ್ಮಪ್ಪ ಬುದ್ಧ!

"ಯೊಳ್ಡ್ ಸಾವ್ರದೈನೂರು!"
—ನೆಪ್ಪಾದ್ರೂ ಐತಲ್ಲ
ಪರ್ಪಂಚ ಕೆಟ್ಟಿಲ್ಲ ಪೂರ್ತ
ನಿನ್ ಯೆಸರಿನ್ ಮಾತ್ಕಾನ
ಮರಿಗಿರಿಯೋಕಾಗ್ದಿದ್ರೆ
ಲೋಕ ಬಾಳ್ತೈತಂತ್ಲೆ ಅರ್ತ!

—ಅಳ್ಳೀಗಮಾರ

ಅಪ್ಪಳಂ-ಅನ್ ಎಂಪ್ಲಾಯ್‌ಮೆಂಟ್

ಕೆಲವು ಹೆಸರುಗಳನ್ನು ಬರೆದಿರುವರಂತೆ ಓದಹೋದರೆ, ಮನಸ್ಸು ಸ್ವಲ್ಪ ಉಗ್ಗಿ ಏನೇನೋ ಹೇಳುವಂತಾಗುತ್ತದೆ. ಉದಾಹರಣೆಗೆ : ಮಹಾಬಲೋನಿಸ್ ಎಂದು ಕೆಲವರು. ಮಹಲನೋಬಿಸ್ ಎಂದು ಹಲವರು, ಮಹಾಲನಬಿಸ್ ಎಂದು ಇತರರು ಇತ್ಯಾದಿ.

ಇತ್ತೀಂದೀಚೆಗೆ ಪತ್ರಿಕೆ ಓದುವವನಿಗೆ ಈ ಹೆಸರು ಕಣ್ಣಿಗೆ ಕಟ್ಟಿದಂತಿದೆ. ದ್ವಿತೀಯ ಪಂಚವಾರ್ಷಿಕ ಯೋಜನೆಯ ಕರಡು ಪ್ರತಿಯ ಅಸ್ಥಿಪಂಜರವನ್ನು ರಚಿಸಿದಾತನೇ ಈ ಮಹಾ ಮೇಧಾವಿ !

ಯೋಜನೆಯ ತಿರುಳೇನು ? ಭಾರತದ ಕೈಗಾರಿಕಾ ಪ್ರಗತಿಯಲ್ಲಿ ಮೂವತ್ತೈದು ಕೋಟಿ ಜನರಲ್ಲಿ ಆದಷ್ಟು ಹೆಚ್ಚು ಜನರಿಗೆ ಕೆಲಸ ಒದಗಿಸುವುದು. ಕಾರಣ ರಾಷ್ಟ್ರಕೈಗಾರಿಕಾ ಕ್ರಮದೊಡನೆ, ಗೃಹಕೈಗಾರಿಕಾ ಪ್ರಗತಿಯನ್ನೂ ಸಮಸಮ ಸಾಧಿಸುವುದು.

* * *

ನನಗನ್ನಿಸಿತು. ಈ ಗೃಹಕೈಗಾರಿಕಾ ಪ್ರಗತಿಗೆ ಗೃಹಸ್ಥರಿಲ್ಲದ ಗೃಹಿಣಿಯರನ್ನು ಕೇಂದ್ರೀಕರಿಸಿಕೊಂಡರೆ, ದೇಶದ ಪ್ರಗತಿ ಖಂಡಿತ. ೩೫ ಕೋಟಿ ಭಾರತೀಯರಲ್ಲಿ, ೧೭॥ ಕೋಟಿ ಹೆಂಗಸರು ಅದರಲ್ಲಿ ೩೫–೫೫ ವಯಸ್ಸಿನವರು ೩॥ ಕೋಟಿಯಾದರೂ ಕೆಲಸವಿಲ್ಲದೆ, ಮನೆಯಲ್ಲಿ ಗಂಡನ ಕಾಟವಿಲ್ಲದೆ ಇರುವವರು. ಇವರನ್ನೆಲ್ಲಾ ಉಪಯೋಗಿಸಿಕೊಂಡ ಯೋಜನೆಯು ಭಾರತದ ಭಾಗ್ಯವನ್ನು ಖಂಡಿತ ಸಾಧಿಸುತ್ತೆ ಎಂದು ನನ್ನ ದೃಢ ನಂಬಿಕೆ.

ಈ ಅಂಬರ್ ಚಕ್ರಕ್ಕೆ ೨೦೮ ಕೋಟಿ ಹಾಳು ಮಾಡುವ ಬದಲು ಒಂದು ಲಟ್ಟಣಿಗೆ, ಒಂದು ಹಲಗೆ, ಒಂದು ಯೂನಿಟ್ಟಿಗೆ. ಎಂದು ಲೆಕ್ಕ ಹಾಕಿ ೩॥ ಕೋಟಿ ಲಟ್ಟಣಿಗೆ, ೩॥ ಕೋಟಿ ಹಲಗೆ, ೩॥ ಕೋಟಿ ಗೃಹಸ್ಥರಿಲ್ಲದ ಗೃಹಿಣಿಯರಿಗೆ ಹಂಚಿದರೆ ; ಅವರು 'ಅಪ್ಪಳಂ' ಮಾಡಲು ಶುರು ಹಚ್ಚಿದರೆ ; ಈ ಅಪ್ಪಳಂ ಅನ್ನು ಸರ್ಕಾರವೇ ಸಹಕಾರ ಸಂಘಗಳ ಮೂಲಕ ಕೊಂಡು ಮಾರಲು ಶುರುಮಾಡಿದರೆ,

ಎರಡನೆಯ ಪಾಂಚವಾರ್ಷಿಕ ಯೋಜನೆಯ ಖೋತಾ ಮೊಬಲಗು ಸುಲಭವಾಗಿ ಹೊರದೇಶಗಳಿಂದ ಸರಿತೂಗಬಹುದು ಎಂದನ್ನಿಸುತ್ತದೆ.

ಇದು ಸಾಧ್ಯವೇ ? ಎಂದು ನೀವೆನ್ನಬಹುದು ?

ಕೇಳಿ ! ಸಾವಧಾನವಾಗಿ ಕೇಳಿ ! !

ಒಂದಾಕೆ ಒಂದು ದಿನಕ್ಕೆ ಸರಾಸರಿ ಇನ್ನೂರು ಹಪ್ಪಳಗಳನ್ನು ಅಥವಾ ಅಪ್ಪಳಂಗಳನ್ನು ದೇಶದ ರೀತ್ಯಾ ಒತ್ತಿಡಬಹುದು.

ತಿಂಗಳಿಗೆ ಇಪ್ಪತ್ತೇಳು ದಿವಸ ಅಂತ ಲೆಕ್ಕ ಹಾಕಿ, ಹರಿದ ಮುರಿದ ಹಪ್ಪಳಗಳನ್ನು ವಜಾ ಮಾಡಿದರೂ, ಒಬ್ಬಾಕೆ ವರ್ಷಕ್ಕೆ ೫೦೦ ರೂಪಾಯಿಗಳಷ್ಟು ಅಪ್ಪಳಂ ಲಾಭ ಗಳಿಸಬಹುದು. ಅಂದರೆ ೩|| ಕೋಟಿಗೆ ?

೧೫೦೦ ಕೋಟಿ ರೂಪಾಯಿ ಸುಲಭ ಸಂಪಾದನೆಯಲ್ಲವೇ ?

ಇಷ್ಟು ವ್ಯಾಪಾರ ಸಾಧ್ಯವೇ ಎನ್ನಬಹುದು ನೀವು !
ಆದರೆ ಈ ರೀತಿ ಯೋಜನೆ ಹಾಕಿ ನೋಡಿ ! !
ಹುರುಳಿ ಹಪ್ಪಳ ಸ್ಕಾಟ್ಲೆಂಡಿಗೆ ಕಳಿಸಿದರೆ.
ಮೆಂತ್ಯದ ತಿಳಿಕಹಿಯ ಹಪ್ಪಳ ಇಂಗ್ಲೆಂಡಿಗೆ ಕಳಿಸಿದರೆ.
ಸ್ವಲ್ಪ ಗರಮಾಗರಂ ಮೆಣಸುಮುಂದಾದ ಹಪ್ಪಳ ಅಮೆರಿಕಾಕ್ಕೆ ಕಳಿಸಿದರೆ.
ಉಪ್ಪು ಮುಂದಾದ ಹಪ್ಪಳವನ್ನು ರಷ್ಯಾಕ್ಕೆ ರವಾನಿಸಿದರೆ.
ಉದ್ದಿನ ಹಪ್ಪಳವನ್ನು ವಾಯುಮಾರ್ಗ ಜಪಾನಿಗೆ ಸಾಗಿಸಿದರೆ.
ಬಾಗಿನದ ಹಪ್ಪಳವನ್ನು ಬಾಂಡುಂಗ್ ರಾಷ್ಟ್ರಗಳಿಗೆ ಕಳಿಸಿದರೆ.
ಮಂಗಳೂರಿನ ಹಲಸಿನ ಹಪ್ಪಳವನ್ನು ನ್ಯೂಜಿಲೆಂಡಿನಲ್ಲಿ ಮಾರಿದರೆ.
ಹಪ್ಪಳದ ಪ್ಯಾಕೆಟ್ ಮೇಲೆ ಮಾಡಿದವರ ವರ್ಣ ಚಿತ್ರ ಅಂಟಿಸಿದರೆ.

ಸಾಕಷ್ಟು ಜಾಹಿರಾತು ಮಾಡಿದರೆ ಈ ಉದ್ಯಮ ಭಾರತದಲ್ಲಿ ಹೊನ್ನು ಜೇನು ಸುರಿಸಬಹುದೇನೋ ಎನ್ನಿಸುತ್ತೆ.

* * *

ಅಂದ ಹಾಗೇ ಮದ್ರಾಸಿನ ಚಾಣಾಕ್ಷರು ಈ ಉದ್ಯಮವನ್ನು ಸರಕಾರದ ಅಂತಸ್ತಿನಲ್ಲೇ ಶುರುಹಚ್ಚಲು ತಯಾರಾಗಿದ್ದಾರಂತೆ.

ಕನ್ನಡ ಮಾದರೀ ದೇಶಸ್ಥರು ಹಿಂದೆ ಬೀಳುವರೇ ? ?

—ಅಪ್ಪಳಾಚಾರಿ

ಸತ್ಯಾ-ಗ್ರಹ

ದೇಶಾದ್ಯಂತ ಗೋವಾ ಸತ್ಯಾಗ್ರಹವು ನಡೆಯುತ್ತಿದ್ದರೆ ಮಡೆಯೂರಿನವರೇನು ಸುಮ್ಮನಿರುವರೇ? ಮಡೆಯೂರು ಯಾರಿಗಿಂತ, ಯಾವ ವಿಧದಲ್ಲಿ ಎಲ್ಲಿ ಕಮ್ಮಿ? ಮಡೆಯೂರಿನ ಪ್ರತಿಭೆಯು ಅನನ್ಯ ಸಾಧಾರಣವಾದದ್ದು ಹಾಗೂ **ಸರ್ವತೋಮುಖ ವಾದದ್ದು**! ಹತ್ತು ಲಕ್ಷ 'ಎಕರೆ'ಯು ಕ್ಷೇತ್ರದಲ್ಲಿ ಅರ್ಧ ಲಕ್ಷ "ಎಕರ"ರನ್ನು ಹಿಡಿದಿಟ್ಟೆಯೆಂದ ಮೇಲೆ ಮರುಮಾತೇಕೆ? ಮೇಲಾಗಿ ಮಡೆಯೂರು ನಮ್ಮೂರು!

ಪಂಪನಿಗೆ ಬನವಾಸಿ ದೇಶವು ಹೇಗೋ, ಮಡೆಯೂರು ನನಗೆ, ಹಾಗೆ. "ಆರಂಕುಶ ಮಿಟ್ಟೊಡಂ ನೆನೆವುದೆನ್ನ ಮನಂ ಮಡೆಯೂರು ಅಸ್ಯೆಲಂ"* ಪಂಪನದು "ಪುಲಿಗೆರೆಯ ತಿರುಳ್ಗನ್ನಡ"ವಾದರೆ ನೊದ್ದಣನದು "ಮಡೆಯೂರ ಮರುಳ್ಗನ್ನಡ."

ಮಡೆಯೂರ ಇತಿಹಾಸದ "ಸೀಸಪುಟ"ಗಳನ್ನು ತಿರುವಿಹಾಕಿದರೆ ಆಶ್ಚರ್ಯ ಕರವಾದ ಸಂಗತಿಗಳು ಹೊರಬೀಳುತ್ತವೆ:—ಮಡೆಯೂರಿಗೆ ಸೇರಿರುವ ಆಕಾಶದಲ್ಲಿ ಹಾರಿರುವ ಫ್ಲೈಯಿಂಗ್ ಸಾಸರುಗಳ ಸಂಖ್ಯೆ ಅಗಣಿತ (ಆಗೊಮ್ಮೆ ಅಲ್ಲಿ ನಡೆದ ನೂಕುನುಗ್ಗಲು ಇತಿಹಾಸ ಪ್ರಸಿದ್ಧ) ಮತ್ತೆ, ನಮ್ಮೂರಿನಲ್ಲೂ ರೇಡಿಯೋ ಆ್ಯಕ್ಟಿವ್ ವೃಷ್ಟಿಯಾಗಿದೆ (ಕ್ರಿ. ಪೂ. ಮೂವತ್ತನೇ ಶತಮಾನದಲ್ಲೇ, ಮೊಟ್ಟಮೊದಲ ವಿಕರಣ ಕ್ರಿಯಾವೃಷ್ಟಿಯಾಗಿತ್ತು). ಅಂಥಹುದರಲ್ಲಿ ನಮ್ಮೂರು ಯಾರಿಗಿಂತ ಎಲ್ಲಿ ಕಮ್ಮಿ. —ಮದ್ರಾಸ್, ಬೊಂಬಾಯಿಗಳ ಜನರು ಸಂಧ್ಯಾಕಾಲದಲ್ಲಿ ಸೂಟ್‌ಬೂಟ್‌ಗಳನ್ನು ಧರಿಸಿ, ಸಮುದ್ರದ ಬೀಚಿನ ಮುಂದೆ ವಾಯುಸೇವನೆ ಮಾಡಲು ನಿಂತರೆ, ಮಡೆ ಯೂರಿನ ಪುಡಾರಿಗಳು ವೀರಗಚ್ಚೆಯನ್ನು ಹಾಕಿ ಚರಂಡಿಗಳ ಮುಂದೆ ನಿಂತು "ಕೋರೇ ಬೀಡಿ" ಸೇವನೆಯನ್ನು ಮಾಡುತ್ತಾರೆ. ಇಷ್ಟಕ್ಕೆ ನಮ್ಮೂರ ಪ್ರೌಢಿಮೆಯು ಪರಿಸಮಾಪ್ತಿ ಹೊಂದದಿದ್ದರೆ, ಜಗತ್ತಿನ ಇತಿಹಾಸವೇ ಬದಲಾಗುತ್ತಿತ್ತು, But for one Invention. ಮೊನ್ನೆ ನಮ್ಮೂರಿನ ದಿಬ್ಬದ ಬದಿಯಲ್ಲಿ ಹಠಾತ್ತನೆ ಸಿಕ್ಕ ಪ್ರಾಕ್ತನ (ಕ್ರಿ. ಪೂ. 30) ಶಿಲಾಶಾಸನವೊಂದು, "ಕರಮ್‌ಚಂದ್ ಗಾಂಧಿ" ಯವರ ಹೆಸರು ಹಾಗಲ್ಲವೆಂದೂ, ಅವರ ನಿಜವಾದ ಹೆಸರು "ಗಾಂಧೀ ಕರಿಯಪ್ಪ" ನೆಂದೂ, ಅವರ ಜನ್ಮಸ್ಥಳವು ಪೋರ್ ಬಂದರಲ್ಲದೆ ಮಡೆಯೂರೆಂದೂ ಘಂಟಾ ಘೋಷವಾಗಿ ಸಾರುತ್ತಿದೆ; (ಅನುಮಾನವಿದ್ದವಗೆ ಧಿಕ್ಕಾರ). Again that thing! ಯಾವುದು? ಪೂರ್ಣ ಸೂರ್ಯಗ್ರಹಣ–ಅದು ಸಂಪೂರ್ಣವಾಗಿ

---

* ASYLUM

ಸಿಲೋನಿನಲ್ಲಿ ಕಾಣಲಿಲ್ಲ. ಆದರೆ ಅದು ನಮ್ಮೂರಲ್ಲಿ ಅಪೂರ್ಣ (At least partial)ವಾಗಿಯಾದರೂ ಗೋಚರಿಸಿತು!! some thing is better than nothing ಅಲ್ವೆ ?

ಇಷ್ಟೆಲ್ಲಾ Qualifications ಇದ್ದು ಸತ್ಯಾಗ್ರಹವೆಂಬ ನೌಕರಿಯಲ್ಲಿ ಮಡೆಯೂರಿನವರಿಗೆ ಸ್ಥಳವಿಲ್ಲವೇ ? ಕಾಕ-ಟೊಂಗಾ ನ್ಯಾಯವೆಂಬಂತೆ ಈಗ ಪರಿಸ್ಥಿತಿಯೂ ಒದಗಿ ಬಂದಿದೆ. "ಕಳೆದುಹೋದ ಕಾಲವು ತಿರುಗಿ ಬರಬೇಕಾದರೆ ಅನೇಕ ಯುಗಗಳೇ ಆಗುತ್ತದೆ" ಯೆಂದು ನಮ್ಮೂರಿನ ಕಾಂಗ್ರೆಸ್ ಹುರಿಯಾ(ಗಾ)ಳು, ಓಂ. ಶಟಗೋಪಯ್ಯನವರು ಹೇಳುತ್ತಾರೆ. ಆದ್ದರಿಂದ ಮಡೆಯೂರಿನವರು ಕೈಯಲ್ಲಿನ ಹಕ್ಕಿಯನ್ನು ಬಿಡುವವರಲ್ಲ.

ಎಂತಲೇ ಪಲ್ಲಾಗಟ್ಟಿ ಶಟಗೋಪಯ್ಯನವರೂ, ಕುದುರೇಪೇಟೆ ಮಹಂತಪ್ಪನವರೂ, ಕೂಡೆ ಹಾಕಿಬಿಟ್ಟರು ಒಂದು ಗ್ಯಾಂಗ್ನ. ಸಭೆಯ ಮುಂದೆ ತಮ್ಮ ಭವ್ಯ ಧ್ಯೇಯವನ್ನು ಮಂಡಿಸಲು, ಶಟಗೋಪಯ್ಯನವರು "ಶೃಂಗಾರ ಭಯಾಶ್ಚರ್ಯ" ಪೂರಿತವಾದ, ಹಾಗೂ "ವರ್ತಮಾನ ಭೂತ ಭವಿಷ್ಯತ್" ಕಾಲಾತೀತವಾದ ಒಂದು ಪ್ರಚಂಡ, ವಿತ್ತಂಡ ಭಾಷಣ (sorry ವಾಕ್ಷಣ is that)ವೊಂದನ್ನು ಮಾಡಬೇಕಾಯಿತು. ಶಟಗೋಪಯ್ಯನವರು ಹೇಳಿದರು :—

—"ಮಡೆಯೂರಿನ ಕವಿಗಳೆ, ವಿಜ್ಞಾನಿಗಳೇ, ವೇದಾಂತಿಗಳೇ ರಾಜಕಾರಣಿಗಳೇ (ಮಾತ್ರವಲ್ಲದೆ ಮಡೆಯೂರಿನಲ್ಲಿ ಜನಸಾಧಾರಣರು ನೆಲೆಸುವುದೆಂದರೇನು ?) ಈಗ್ನಾವೇನ್ಮಾಡ್ಬೇಕಾಗ್ಯೆತೀಂದ್ರೆ, ಮಮಮಮದ್ರಾಸಿನವರಂತೆ, ಬೊಬೊಬೊಬೊಂಬಾಯಿಯವರಂತೆ ಅಅಅಅ (ಇ ಈ.ಉ.ಊ.) ಅಂಧ್ರದವರಂತೆ (ಅವತ ಭಾಷಣವನ್ನು ಪ್ರಸಾರ ಮಾಡಿದ Mikeಗೆ ಸ್ವಲ್ಪ ಉಗ್ಗು ಅಷ್ಟೆ). ನಾವೂ ಸಹ ಸತ್ಯಾಗ್ರಹ ಮಾಡ್ಬೇಕೂಂತ. ಈಗ್ನೋಡ್ರಪಾ ಅವ್ರೆಲ್ಲಾ ಗೋವಾ ಭಾರತದ್ದೂಂತ ಅಂತಾರೆ. ಆದರ ನಾಯೇಳೋದೇನೂಂದ್ರೆ ಗೋವಾ ನ್ಯಾಯವಾಗಿ ಮ.ಮ.ಮ. ಮಡೆಯೂರಿಗೆ ಸೇರಬೇಕೂಂತ. ಇದಕ್ಕಾಗಿ ನೀವು ನಮಗೆ ಆಂಧ್ರ ಸತ್ಯಾಗ್ರಹಿಗಳ್ನೋಸ್ಕ್ರ ಮೆರವಣಿಗೆ ಮಾಡಿ ಅಂಗ್ಡಿಗ್ಳಿಂದ ಹಣ ವಸೂಲಿ ಮಾಡ್ಬೇಕೂ ಊಟಿ."

— ಈ ಭಾಷಣವಾದ ತಕ್ಷಣ ಊರಲ್ಲಿ ಪ್ರಭಾತ್ ಫೇರಿ ಹೊರಟಿತು (ಸಂಜೆ 5 ಗಂಟೆಯಲ್ಲಿ). ಆದರೆ ಆಕ್ಷಣವೇ ಪಲ್ಲಾಗಟ್ಟಿಯವರಿಗೆ ಒಂದು ಸಂಶಯ ತಲೆದೋರಿತು-ಮೆರವಣಿಗೆಯೊಡನೆ ಹೊರಟರೆ ಬಟ್ಟೆಬರೆಗಳನ್ನು ಸುತ್ತಿಕೊಳ್ಳುವುದಾಹಾಗ ಮತ್ತು ಹಣ್ಣು, ಹಂಪಲು, ಇತ್ಯಾದಿಗಳನ್ನು ಕೊಳ್ಳಲು ಟೈಮೆಲ್ಲಿ ಎಂದು, "ಮತ್ತೆ ನಾಳೆಯೇ ಆಗಸ್ಟ್ 15. ಇಂದೇ ಟ್ರೈನ್‌ಗೆ ಹೊರಡದಿದ್ದರೆ ಈ ಉಡಾಳರಿಗೆ ನಾನು ಹೋಗುವುದು ಗೋವಾಕ್ಕೊ ಅಥವಾ........ಂತ ಸಂಶಯ ಬರುವುದು ದಿಟ" ಎಂದು ಯೋಚಿಸಿದ ಪಲ್ಲಾಗಟ್ಟಿಯವರು "ಟೈಮೂ ಉಳೀಬೇಕು ಹಾಗೂ ದುಡ್ಡೂ ಬರಬೇಕು" ಅಂಥಹ ಒಂದು ಪ್ಲ್ಯಾನ್ ಹಾಕಿದರು. ಮೆರವಣಿಗೆಗೆ ಓಡುವುದಕ್ಕೆ

ಸಲಹೆ ಕೊಟ್ಟರೆ ಹೇಗೆ ಎಂದು ಅವರ Idea. ಇದನ್ನು ಕೇಳಿದ ಮಹಂತಪ್ಪನವರಿಗೆ ಸ್ವಲ್ಪ ದಿಗಿಲೇ ಆಯಿತು.

ಈ ಪ್ರಕಾರವಾಗಿ ಓಡುವ ಸತ್ಯಾಗ್ರಹ ಮೊದಲಾಯಿತು. ಆದರೆ ಇದು ಬಹಳ ಹೊತ್ತು ನಡೆಯಲಿಲ್ಲ. ಕಾರಣ, ಅರಚುತ್ತಾ ಹಾಗೂ ಓಡುತ್ತಾ ಬರುತ್ತಿದ್ದ ಸತ್ಯಾಗ್ರಹಿಗಳನ್ನು ಕಂಡು ಆಡುವ ಮಕ್ಕಳು "ಕಿಟಾರ್" ಎಂದು ಕಿರಿಚಿಕೊಂಡು ಅಳಲು ಪ್ರಾರಂಭ ಮಾಡಿದವು. ಆದ್ದರಿಂದ 'ಮೆರವಣಿಗೆ'ಯು ನಿಧಾನವಾಗಿಯೇ ಹೊರಡತೊಡಗಿತು (ಏತನ್ಮಧ್ಯೆ ಪಲ್ಲಾಗಟ್ಟೆಯವರು ಮಾರ್ಕೆಟ್ಟಿನ ಕಡೆಗೆ ನುಸುಳಿ ಹೊರಟಿದ್ದು ಗೊಂದಲದಲ್ಲಿ ಯಾರ ಕಣ್ಣಿಗೂ ಬೀಳಲಿಲ್ಲ)

ಇತ್ತ, ಮೆರವಣಿಗೆಯವರು, ಪ್ರತಿ ಅಂಗಡಿಯ ಮುಂದೂ ನಿಂತು "ಸಾಲ ಜಾರನಿಗೆ ಧಿಕ್ಕಾರ", "ಗೋವಾಕ್ಕೆ ನಾವೆಲ್ಲಾ ಥ್ರಂವಾ", "ಗೋಹತ್ಯೆ ನಿಲ್ಲಲಿ", "ಕಾರ್ಮಿಕರ ಸಂಬಳ ಹೆಚ್ಚಲಿ", "ಬ್ರಿಟಿಷರೇ ತೊಲಗಿರಿ" ಎಂದು ಮುಂತಾಗೆಲ್ಲಾ ಘೋಷಿಸಿ ಹಣವನ್ನು ವಸೂಲಿ ಮಾಡತೊಡಗಿದರು. ಒಬ್ಬ ಈರುಳ್ಳಿಯಂಗಡಿಯವನು ಇನ್ನೂ ವ್ಯಾಪಾರವಾಗಿಲ್ಲವೆಂದ. ತಕ್ಷಣವೇ ಮೊದಲಾಯಿತು "ಉಳ್ಳಾಗಡ್ಡಿಗೆ ಧಿಕ್ಕಾರ" ಎಂಬ ವೀರ ನುಡಿಗಳು. ಆದರೆ ಅಂಗಡಿಯವನು "ಜಪ್ಪಯ್ಯ" ಎನ್ನಲಿಲ್ಲ. ನಮ್ಮೂರಿನ ಯುವಕರು ಬಿಡುತ್ತಾರೆಯೇ "ಲಭೋ-ಲಭೋ" ಕಾರ್ಯವನ್ನು ಪ್ರಾರಂಭಿಸಿಬಿಟ್ಟರು. ಅಂಗಡಿಯವನಿಗೆ ಅರ್ಥವಾಗಲಿಲ್ಲ. ಗ್ರಹನಕ್ಷತ್ರಗಳ ವಿಚಾರವನ್ನು ಅಲ್ಪ ಸ್ವಲ್ಪ ಬಲ್ಲವನಾದರೂ ಸತ್ಯಾ-ಗ್ರಹಗಳ ವಿಚಾರದಲ್ಲಿ ಅವನು ಅಜ್ಞ. ಅವನು ಮೆರವಣಿಗೆ(?)ಗೆ ಕೂಗಿಕೊಂಡು ಹೇಳಿದ- "ಸುಮ್ಕೆ ಹೊಂಟೋಗ್ರಿ. ನಂಗೆ ಚೆನ್ನಾಗಿ ಗೊತ್ತು ಇವತ್ತು ಕಾಮನಹಬ್ಬ ಅಲ್ಲಾ ಅಂತ; ನೀವು ಬಾಯಿ ಬೊಡಕುಂಡರೂ ಕೊಡೊಲ್ಲ, ಗಂಟ್ಲು ಹರಕೊಂಡರೂ ಕೊಡಲ್ಲ."

ಇಂತು ಮುಂದುವರಿದು ಪ್ರಭಾತ್ ಪೇರಿ ಸಂಜೆ ಐದು ಗಂಟೆಯಲಿ...."

ನಮ್ಮೂರಿನವರು ತಾವು ಹೊತ್ತ ಇನ್ನೂರು ರೂ.ಗಳನ್ನು ಬೆಳಗಾಮಿನ ಹೋಟೆಲ್ ಸಿನಿಮೇತ್ಯಾದಿಗಳಲ್ಲಿ ದೇಶಸೇವೆ ನಡೆಸಿ ಹಿಂತಿರುಗುವ ವೇಳೆಗಾಗಲೇ 'ಶೇಂಗಾಟೈಂಸ್'ನಲ್ಲಿ ದಪ್ಪಕ್ಷರಗಳಲ್ಲಿ ಪ್ರಕಟವಾಗಿತ್ತು.

"ಮಡೆಯೂರಿನವರ **ವೀರ್ಯಪ್ರದರ್ಶನ!**"

ಗೋವಾದಲ್ಲಿ ಆಗಲೇ ಆತಂಕವುಂಟಾಗಿದೆ...."

ವಿಜಯಶಾಲಿಗಳಾಗಿ ಹಿಂತಿರುಗಿ ಬಂದ ಸತ್ಯಾಗ್ರಹಿಗಳಿಗೆ ಹಾರಗಳನ್ನು ಹಾಕಿದಾಗ, ಪಲ್ಲಾಗಟ್ಟೆಯವರು "ಅಯ್ಯೋ" ಎಂದರಂತೆ. ಏಕೆಂದು ಕೇಳಲಾಗಿ "ಒಂದು ಗುಂಡು ನನ್ನ ಕತ್ತನ್ನು ಸವರಿಕೊಂಡು ಹೋಯಿತು" ಎಂದರಂತೆ.

(ಇತಿ ಸಮಾಪ್ತಿಃ ಸತ್ಯಾ-ಗ್ರಹ ಕಾಟಂ)

—ಮೊದ್ದಣ

ನೀತಿಯ ಕತೆಗಳು-ಬಲಿತವರಿಗೆ

ಹಾವು - ರಾಜಕುಮಾರಿ

ಒಂದು ಊರಿನಲ್ಲಿ ಒಂದು ದೊಡ್ಡ ಮರವಿತ್ತಂತೆ. ಅದರಲ್ಲಿ ಕಾಗೆಗಳು ಗೂಡು ಕಟ್ಟಿದ್ದುಕೊಂಡವಂತೆ. ಆ ಗೂಡಿನಲ್ಲಿ ಮೊಟ್ಟೆಯಿಟ್ಟು ಆಹಾರ ಸಂಪಾದನೆಗೆ ಹೊರಕ್ಕೆ ಹೋಗಿ ಬರುವ ವೇಳೆಗೆ ಮರದ ಅಡಿಯಲ್ಲಿದ್ದ, ಹುತ್ತದ ಹಾವು ಹೊರಕ್ಕೆ ಬಂದು ಮರ ಹತ್ತಿ ಮೊಟ್ಟೆಗಳನ್ನು ತಿಂದು ತೇಗಿ ತಿರುಗಿ ಹುತ್ತವನ್ನು ಸೇರಿಕೊಂಡು ಬಿಡುತ್ತಿತ್ತಂತೆ. ಕಾಗೆಗಳು ಪಾಪ ಬಲು ದುಡಿದು ನೊಂದುಕೊಳ್ಳುತ್ತಿದ್ದುವಂತೆ.

ಒಂದು ದಿನ ರಾಜಕುಮಾರಿ ಪಕ್ಕದ ಕೆರೆಗೆ ಸ್ನಾನಕ್ಕೆ ಬಂದಳಂತೆ. ಒಡವೆ ತೆಗೆದಿಟ್ಟಳಂತೆ. ಕಾಗೆಗಳು ಒಡವೇನ ಎತ್ತಿಕೊಂಡು ಬರಲು ಹೊರಟವಂತೆ. ಆಗ ಹಾವು ಇದನ್ನು ನೋಡಿ, ಹುತ್ತ ಬಿಟ್ಟು ಬಂದು, ಮರದ ಪೊಟರೆಯಲ್ಲಿ ಅವಿತು ಕೊಂಡಿತಂತೆ. ಕಾಗೆಗಳು ಒಡವೇನ ಹಳೇ ಕತೆಯಂತೆ, ಮರದ ಅಡಿಯ ಹುತ್ತದಲ್ಲಿ ಹಾಕಿದುವಂತೆ. ಕಾವಲುಗಾರರು ಬಂದು ಹುತ್ತ ಅಗೆದು ಒಡವೆ ತೆಗೆದುಕೊಂಡು ಹೋಗುವಾಗ ಅಲ್ಲೇ ಹಾರಾಡುತ್ತಿದ್ದ ಆ ಕಾಗೆಗಳನ್ನು ನೋಡಿ ಬಾಣ ತೆಗೆದು ಬಿಲ್ಲು ಹೆದೆಯೇರಿಸಿ ಎಲ್ಲಾ ಕಾಗೆಗಳನ್ನೂ ಷಿಕಾರಿ ಮಾಡಿವರಂತೆ.

ಆ ಮೇಲೆ ರಾಜಕುಮಾರಿಯು ಕಾವಲುಗಾರರರಿಗೆ ಬಹುಮಾನ ಕೊಟ್ಟಳಂತೆ.

ಹಾವು ಸುಖವಾಗಿ ಮುಂದಿನ ಬಾಳ ನಡೆಸಿತಂತೆ.

ಮಂಗಳೂರಿನ ಮಾಣಿ :–ಏನು ಬೇಕೂಪ್ಪ ?

ಮೈಸೂರ ಗಿರಾಕಿ :–ನಿಮ್ಮಪ್ಪ ಕಣೋ ಬೇಕೂಫ, ಹಲ್ಲಿಡಿದು ಮಾತಾಡು.

ಮಾಣಿ :–ಯಾಕ್ಸಾರ್ ಸಿಟ್ಟಾಗ್ತೀರಿ. "ಬೇಡಾ" ಅಂದಿದ್ರಾಗ್ತಿತ್ತು ...

ಗಿರಾಕಿ :–ಮತ್ನೋಡಿದ್ಯಾ. "ಬೇಡ" ಅಂತಿಯಾ ? ನಿಮ್ಮಜ್ಜ ಕಣೋ ಕುರುಬ;
ನಾನು ಬೇಡನಲ್ಲ, ತಿಳಿದಿರು.

ಕೊರವಂಜಿ

ಬಳೇಪೇಟೆ : : ಬೆಂಗಳೂರು 2

ಕೊರವಂಜಿಯು ತಿಳಿನಗೆಯ ಸಚಿತ್ರ ಮಾಸಪತ್ರಿಕೆ. ತಿಳಿಹಾಸ್ಯದ ಲೇಖನಗಳು ಹರಟೆಗಳು, ಅಣಕವಾಡುಗಳು, ನಗೆ ಹಾಡುಗಳು ಇವುಗಳಿಗೆ ಸರ್ವದಾ ಸುಸ್ವಾಗತ ವುಂಟು. ಆದರೆ ವ್ಯಕ್ತಿಯನ್ನುದ್ದೇಶಿಸಿ ಬರೆದ ಲೇಖನಗಳಿಗೆ ಎಡೆಯಿಲ್ಲ.

ಲೇಖನಗಳನ್ನು ಕಳುಹಿಸುವವರು ತಮ್ಮಲ್ಲಿ ಒಂದು ಪ್ರತಿಯನ್ನಿಟ್ಟುಕೊಂಡರೆ ಬಹಳ ಒಳಿತು. ಸುಲಭವಾಗಿ ಓದುವಂತೆ ತಿಳಿಬರಹದಲ್ಲಿ ಬರೆದರೆ, ಅಚ್ಚಾದಾಗ ತಪ್ಪು ನೆಪ್ಪುಗಳು ಕಡಿಮೆಯಾಗುವುವು. ಒಪ್ಪಿದ ಲೇಖನಗಳಿಗೆ ಪ್ರತ್ಯುತ್ತರ ಉಂಟು.

ಸಂಪಾದಕೀಯ ಪತ್ರವ್ಯವಹಾರಗಳನ್ನು ಸಂಪಾದಕರಲ್ಲೂ ವ್ಯವಸ್ಥಾಪಕರಲ್ಲಿ ಮಿಕ್ಕ ವಿಚಾರಗಳನ್ನೂ ಪ್ರಸ್ತಾಪಿಸಬೇಕು.

ವಾರ್ಷಿಕ ಚಂದಾ ಅಂಚೆ ಮೂಲಕ ರೂ. ೩—೦—೦
ಬಿಡಿ ಪ್ರತಿ ಕೇವಲ ಆಣೆ ೦—೪—೦

ಚಂದಾದಾರರು ವಿಳಾಸ ಬದಲಾವಣೆಯಾದಲ್ಲಿ, ಕೂಡಲೆ ನಮಗೆ ತಿಳಿಸಿದರೆ ಬಹಳ ಸಹಾಯ ಮಾಡಿದಂತಾಗುವುದು.



ವೈಟೋಫೆರಿನ್

(ಆಧುನಿಕ ಶಕ್ತಿವರ್ಧಕ ಟಾನಿಕ್)

ಇದರಲ್ಲಿ "ಎ" "ಬಿ" ಮತ್ತು "ಡಿ" ಎಂಬ ವೈಟಮಿನ್ನುಗಳೂ, ಐರನ್, ಕ್ಯಾಲ್ಸಿಯಂ ಮುಂತಾದ ಲೋಹ ವಿಶೇಷಗಳೂ, ಶುದ್ಧಗೊಳಿಸಿದ ತಾಮ್ರವೂ, ಮತ್ತು ಮಾಲ್ಟ್‌ಸಾರ, ಜೇನುತುಪ್ಪಗಳನ್ನು ಸೇರಿಸಿ ತಯಾರಿಸಿದ ಒಂದು ಅಮೃತಪಾನ. ಇದರಲ್ಲಿ ದೇಹಶಕ್ತಿಗೆ ಬೇಕಾದ ಸಕಲ ಔಷಧಗಳ ಸಮೂಹವೂ ಇದೆ. ಖಾಯಿಲೆಯಿಂದ ಎದ್ದವರಿಗೂ, ಬಸುರಿ ಬಾಣಂತಿಯರ ದೇಹದಾರ್ಢ್ಯಕ್ಕೂ ಇದು ಅತ್ಯುತ್ತಮವಾದ ಔಷಧ. ಸೇವಿಸಲು ಬಹಳ ರುಚಿಯಾಗಿಯೂ ಮತ್ತು ಮಧುರವಾಗಿಯೂ ಇದೆ.

★ ★

ತಯಾರಕರು :

ದಿ ಮೈಸೂರು ಇಂಡಸ್ಟ್ರಿಯಲ್ ಅಂಡ್ ಟೆಸ್ಟಿಂಗ್ ಲ್ಯಾಬೋರೆಟರಿ ಲಿಮಿಟೆಡ್,

ಮಲ್ಲೇಶ್ವರಂ - - - ಬೆಂಗಳೂರು 3.

Printed by B. S. Iyengar, Bangalore City.

Publisher—B. N. Gupta. Editor—M. Sivaram.